
ಆತ್ಮನು

# ಜ್ಞಾನ ಪ್ರಕಟನೆ ಮತ್ತು ಬಲದ ಆತ್ಮನು



ಆಶಿಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಫೆಬ್ರುವರಿ 2013

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಫೈಯ್ಡ್ ಡಿಸೈನ್ಸ್

Contact Information:
All Peoples Church & World Outreach
# 7M-319, 2nd Floor, 2nd Block
HRBR Layout, Kalyan Nagar, Bangalore 560 043
Karnataka, INDIA

Phone: +91-80-2354 4328, Extn. 35
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - The Spirit of Wisdom, Revelation and Power)

# ಜ್ಞಾನ, ಪ್ರಕಟನೆ
# ಮತ್ತು
# ಬಲದ ಆತ್ಮನು

# ವಿಷಯಸೂಚಿ


| | | |
|---|---|---|
| 1. | ಜ್ಞಾನದ ಆತ್ಮನು | 1 |
| 2. | ಪ್ರಕಟನೆಯ ಆತ್ಮನು | 14 |
| 3. | ಬಲದ ಆತ್ಮನು | 28 |

# 1

# ಜ್ಞಾನದ ಆತ್ಮನು

ಪವಿತ್ರಾತ್ಮನು ತಂದೆ ಮತ್ತು ಮಗನೊಂದಿಗೆ ಒಂದಾಗಿ ದೇವರಾಗಿದ್ದಾನೆ. ಆತ್ಮನು ಭೂಮಿಯ ಮೇಲೆ ದೇವ ಜನರೊಳಗೆ ಮತ್ತು ಅವರ ಮೂಲಕ ಚಲಿಸುತ್ತಿದ್ದಾನೆ. ಆತನು ತನ್ನನ್ನು ವಿವಿಧ ರೀತಿಗಳಲ್ಲಿ ಅಭಿವ್ಯಕ್ತ ಪಡಿಸುತ್ತಾನೆ ಅಲ್ಲದೆ ದೇವ ಜನರೊಳಗೆ ಮತ್ತು ಅವರ ಮೂಲಕವಾಗಿ ಕಾರ್ಯಮಾಡುತ್ತಾನೆ ಮತ್ತು ಅವರನ್ನು ಅನೇಕ ಭಿನ್ನವಾದ ವಿಷಯಗಳನ್ನು ಸಾಧಿಸಲು ಸಮರ್ಥಗೊಳಿಸುತ್ತಾನೆ. ಈ ಒಂದು ಅಧ್ಯಾಯದಲ್ಲಿ ಪವಿತ್ರಾತ್ಮನ ಅನೇಕ ಕ್ರಿಯೆಗಳಲ್ಲಿ ಒಂದು ಕ್ರಿಯೆಯನ್ನು ನಾವು ಕೇಂದ್ರೀಕರಿಸುತ್ತಿದ್ದೇವೆ. ದೇವರ ಆತ್ಮನ ಕಾರ್ಯಗಳ ವಿಷಯವನ್ನು ನಿಮಗೆ ಪರಿಚಯಮಾಡುವುದು ನಮ್ಮ ಉದ್ದೇಶವಾಗಿದೆ. ಅನೇಕರು ಜ್ಞಾನದ ಆತ್ಮನಾಗಿರುವ ದೇವರ ಆತ್ಮನನ್ನುಅದ್ಭುತಕರವಾಗಿ ಅನುಭವಿಸಲು ಮತ್ತು ಹುಡುಕಲು ಪ್ರೋತ್ಸಾಹಗೊಳ್ಳಬೇಕೆಂಬುದು ನಮ್ಮ ಪ್ರಾರ್ಥನೆಯಾಗಿದೆ.

## ದೇವರ ಆತ್ಮನು - ಆತನ ಭಿನ್ನ ಗುಣಧರ್ಮಗಳು

**ಇಷಯನ ಬುಡದಿಂದ ಒಂದು ಚಿಗುರು ಒಡೆಯುವುದು, ಅದರ ಬೇರಿನಿಂದ ಹೊರಟ ತಳಿರು ಫಲಿಸುವದು, ಆ ಅಂಕುರದ ಮೇಲೆ ಜ್ಞಾನವಿವೇಕದಾಯಕ ಆತ್ಮ, ಆಲೋಚನೆ ಪರಾಕ್ರಮಗಳನ್ನು ಹುಟ್ಟಿಸುವ ಆತ್ಮ ತಿಳುವಳಿಕೆಯನ್ನೂ ಯೆಹೋವನ ಭಯವನ್ನೂ ಉಂಟುಮಾಡುವ ಆತ್ಮ, ಅಂತು ಯೆಹೋವನ ಆತ್ಮವೇ ನೆಲೆಗೊಂಡಿರುವದು.** (ಯೆಶಾಯ 11:12)

ಪ್ರವಾದಿಯಾದ ಯೆಶಾಯನು ಯೇಸುವಿನ ಭೂಲೋಕದಲ್ಲಿನ ಸೇವೆಯ ಅವಧಿಯಲ್ಲಿನ ಅಭಿಷೇಕದ ನಿಶ್ಚಲವಾಗಿರುವಿಕೆಯ ಕುರಿತು ಮಾತಾಡಿದ್ದಾನೆ. ಮೆಸ್ಸೀಯನ (ಅಭಿಷೇಕಿಸಲ್ಪಟ್ಟವನು)ಮೇಲೆ ಪವಿತ್ರಾತ್ಮನು ಅಧಿಕಾರ ಕೊಡುವ ಏಳು ಭಿನ್ನವಾದ ವಿಷಯಾಂಶಗಳನ್ನು ಅವನು ಪರಿಚಯ ಮಾಡಿದ್ದಾನೆ. ಅವನು ಏಳು ಭಿನ್ನವಾದ ''ಶಿರೋನಾಮೆ''ಗಳನ್ನು ಉಪಯೋಗಿಸಿದ್ದಾನೆ, ಪ್ರತಿಯೊಂದು ಪವಿತ್ರಾತ್ಮನ ಕಾರ್ಯಗಳ ನಿರ್ದಿಷ್ಟ ಕಣಪಟ್ಟಿ ಮತ್ತು ಅದರಿಂದ ಆತನ ಗುಣಗಳನ್ನು ಪ್ರಕಟಪಡಿಸುತ್ತವೆ. ಪವಿತ್ರಾತ್ಮನು ಕೆಳಕಂಡಂತೆ ಪ್ರಸ್ತಾಪಿಸಲ್ಪಟ್ಟಿದ್ದಾನೆ.

- ಕರ್ತನ ಆತ್ಮನು
- ಜ್ಞಾನದ ಆತ್ಮನು
- ವಿವೇಕದಾಯಕ ಆತ್ಮನು
- ಸಲಹೆಯ ಆತ್ಮನು
- ಬಲದ ಆತ್ಮನು
- ತಿಳುವಳಿಕೆಯ ಆತ್ಮನು
- ಕರ್ತನ ಭಯದ ಆತ್ಮನು

ಇದು ಸಂಪೂರ್ಣವಾದ ಪಟ್ಟಿಯಲ್ಲ ಪವಿತ್ರಾತ್ಮನು ಇತರೆ ''ಶಿರೋನಾಮೆ'' ಅಥವಾ ಹೆಸರುಗಳಾದ ಸತ್ಯದ ಆತ್ಮನು, ಜೀವದ ಆತ್ಮನು, ಸಮಾಧಾನ ಪಡಿಸುವವನು, ಮುಂತಾದವುಗಳನ್ನು ಸತ್ಯವೇದದ ವಚನಭಾಗಗಳಲ್ಲಿ ನಾವು ನೋಡಬಹುದು. ಇಂತಹ ಪ್ರತಿಯೊಂದು ಶಿರೋನಾಮೆ ಅಥವಾ ಹೆಸರು ಪವಿತ್ರಾತ್ಮನು ಯಾರು ಮತ್ತು ಆತನು ಮಾಡುವುದೇನು ಎಂಬುದರ ನಿರ್ದಿಷ್ಟ ವಿಷಯಾಂಶಗಳನ್ನು ಪ್ರಕಟಿಸುತ್ತವೆ, ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಆತನು ಯಾರು ಮತ್ತು ಆತನು ಮಾಡುವುದೇನು ಎಂಬುದನ್ನು ತಿಳಿಯುವುದು ಬಹಳ ಪ್ರಾಮುಖ್ಯ ಆಗ ಮಾತ್ರ ನಾವು ಆತನೊಡನೆ ಆಳವಾದ ಅನ್ಯೋನ್ಯತೆಯನ್ನು ಹೊಂದುತ್ತೇವೆ. ಮತ್ತು ಆತನು ನಮ್ಮೊಳಗೆ ಮತ್ತು ನಮ್ಮ ಮೂಲಕವಾಗಿ ದೊಡ್ಡ ಆಳತೆಯಲ್ಲಿ ಕಾರ್ಯಮಾಡುವುದನ್ನು ಅನುಭವಿಸಬಹುದು.

## ದೇವರ ಆತ್ಮನು - ಸದಾ ಪ್ರಸ್ತುತ, ನಿರಂತರ ಕಾರ್ಯನಿರತನಾಗಿರುತ್ತಾನೆ

**ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು ಆತನು ನಿಮಗೆ ಬೋರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು** (ಯೋಹಾನ 14:16)

ನಂಬಿಕೆಯ ಮೂಲಕವಾಗಿ ಯೇಸುಕ್ರಿಸ್ತನ ರಕ್ತದಿಂದ ರಕ್ಷಿಸಲ್ಪಟ್ಟ ಜನರಾದ ನಮಗಾಗಿ ಪವಿತ್ರಾತ್ಮನು ಇಲ್ಲಿದ್ದಾನೆ. ಆತನು ನಮ್ಮೊಂದಿಗಿರಲೂ, ನಮ್ಮೊಳಗೆ ಕಾರ್ಯಮಾಡಲೂ ಮತ್ತು ನಮ್ಮ ಮೂಲಕವಾಗಿ ಕಾರ್ಯಮಾಡಲೂ ಇಲ್ಲಿದ್ದಾನೆ. ಆತನು ಯಾವಾಗಲೂ ನಮ್ಮೊಂದಿಗಿದ್ದಾನೆ. ಆತನು ಕೆಲವು ಕಾಣದ ರಹಸ್ಯವಾದ ಬಲ ಅಥವಾ ನಾವು ಅನುಭವಿಸದ ಬರೀ ಅದರ ಕುರಿತು ಮಾತನಾಡುವ ಪ್ರಸನ್ನತೆಯ

ಮಾದರಿಯಲ್ಲಿ ಆತನಿಲ್ಲ, ಇಲ್ಲಾ! ಆತನು ಏನಾಗಿದ್ದಾನೋ ಅವೆಲ್ಲವೂ ನಮಗೆ ಆಗಿರಬೇಕೆಂಬುದಾಗಿ ಆತನು ಅಪೇಕ್ಷಿಸುತ್ತಾನೆ. ಆತನೊಬ್ಬನೆ ಮಾಡಬಹುದಾದ ವಿಷಯಗಳನ್ನು ನಮ್ಮ ಮೂಲಕವಾಗಿ ಮಾಡಲು ಆತನು ಬಯಸುತ್ತಾನೆ. ಆತನು ನಮ್ಮ ಜೀವಿತಗಳಲ್ಲಿ ತನ್ನನ್ನು ಹಂಚಿಕೊಳ್ಳಲು ಅಪೇಕ್ಷಿಸುತ್ತಾನೆ.

ಈ ಅಧ್ಯಾಯದಲ್ಲಿ ಪವಿತ್ರಾತ್ಮನಿಗೆ ಕೊಡಲ್ಪಟ್ಟ ಶಿರೋನಾಮೆ/ಹೆಸರುಗಳಲ್ಲಿ ಒಂದಾದ ಜ್ಞಾನದ ಆತ್ಮನ ಬಗ್ಗೆ ಕೇಂದ್ರಿಕರಿಸುತ್ತಿದ್ದೇವೆ. ಜ್ಞಾನದ ಆತ್ಮನಾಗಿ ಆತನು ನಮ್ಮ ಜೀವಿತಗಳೊಳಕ್ಕೆ ದೇವರ ಜ್ಞಾನ ದೈವಿಕ ಜ್ಞಾನವನ್ನು ಹಂಚಿ ಕೊಡುತ್ತಾನೆ. ಒಂದು ಅಥವಾ ಎರಡು ವಾಕ್ಯಗಳಲ್ಲಿ ದೇವರ ಜ್ಞಾನವೇನು ಎಂಬುದನ್ನು ವಿಶ್ಲೇಷಿಸುವುದು ಕಷ್ಟಕರವಾಗಿದೆ. ಅದು ಎಲ್ಲಿ ಪ್ರಾರಂಭವಾಗುತ್ತದೆಂಬುದು ನಮಗೆ ಗೊತ್ತಿದೆ (ಕೀರ್ತನೆಗಳು 111:10) ನಮಗೆ ಅದರ ಗುಣಲಕ್ಷಣಗಳ ಬಗ್ಗೆ ಗೊತ್ತು (ಯಾಕೋಬನು 3:17) ಆದಾಗ್ಯೂ ದೇವರ ಜ್ಞಾನವು ಅಪರಿಮಿತವಾದದು (ರೋಮಾಪುರದವರಿಗೆ 11:33) ಇದು ಏನು ಎಂಬುದನ್ನು ಕೆಲವು ವಚನಗಳಲ್ಲಿ ಸಮರ್ಪಕವಾಗಿ ವ್ಯಕ್ತಪಡಿಸುವುದು ಕಷ್ಟಕರ. ಕೆಲವರು ಜ್ಞಾನವನ್ನು (ಸಾಮಾನ್ಯವಾಗಿ) ತಿಳುವಳಿಕೆಯನ್ನು ಉಪಯೋಗಿಸುವ ಸಾಮರ್ಥ್ಯ ಎಂಬುದಾಗಿ ಹೇಳುತ್ತಾರೆ. ಇತರರು ದೈವಿಕ ಜ್ಞಾನವು, ದೇವರ ಯೋಜನೆ ಮತ್ತು ಉದ್ದೇಶಗಳ ಸೂಕ್ಷ್ಮ ಪರಿಜ್ಞಾನ ಎಂಬುದಾಗಿ ಹೇಳಿದ್ದಾರೆ. ದೈವಿಕ ಜ್ಞಾನವು ದೇವರಿಂದ ಬಂದಂತಹ ಜ್ಞಾನವಾಗಿದೆ, ಜ್ಞಾನದ ಆತ್ಮನು ಎಲ್ಲದರಲ್ಲೂ ಮತ್ತು ಅತ್ಯಧಿಕವಾಗಿ ನಮ್ಮ ಜೀವಿತಗಳಲ್ಲಿ ಹಂಚಿಕೊಡುತ್ತಾನೆ.

ಹಿಂದೆ ಜನರ ಜೀವಿತಗಳಲ್ಲಿ ಜ್ಞಾನದ ಆತ್ಮನು ಕಾರ್ಯಮಾಡಿದ್ದು ಹೇಗೆ ಎಂಬುದನ್ನು ಕಲಿಯುವುದು ಮತ್ತು ಸತ್ಯವೇದದ ವಚನ ಭಾಗಗಳನ್ನು ನೋಡುವುದು ಈ ಅಧ್ಯಾಯದಲ್ಲಿನ ನಮ್ಮ ವಿಚಾರಸರಣಿಯಾಗಿದೆ. ಇಂದಿನ ದಿನಗಳಲ್ಲಿ ಆತನು ನಮ್ಮೊಳಗೆ ಮತ್ತು ನಮ್ಮ ಮೂಲಕವಾಗಿ ಹೇಗೆ ಕಾರ್ಯಮಾಡುತ್ತಾನೆಂಬುದನ್ನು ಮತ್ತು ಆತನು ಬದಲಾಗಿಲ್ಲ ಎಂಬುದನ್ನು ಇದು ನಮಗೆ ತೋರಿಸುತ್ತದೆ. ಇದು ನಮ್ಮ ನಂಬಿಕೆಯನ್ನು ಉನ್ನತಗೊಳಿಸಿ ದೇವರ ಆತ್ಮನು ನಮ್ಮಲ್ಲಿ ಜ್ಞಾನದ ಆತ್ಮನಾಗಿ ಕಾರ್ಯಮಾಡುವುದರಲ್ಲಿ ನಮ್ಮ ನಿರೀಕ್ಷೆಯು ವೃದ್ಧಿಗೊಳ್ಳುತ್ತದೆ. ಖಂಡಿತವಾಗಿ ಆತನು ಹಿಂದೆ ಮಾಡಿದ ಕಾರ್ಯಗಳ ಮಾದರಿಯಲ್ಲೇ ಕಾರ್ಯಮಾಡಲು ಆತನು ಸೀಮಿತವಾದವನಲ್ಲ. ಆತನು ದೇವರಾಗಿದ್ದಾನೆ. ಜ್ಞಾನದ ಆತ್ಮನು ಖಚಿತವಾಗಿ

ನಮ್ಮೊಳಗೆ ಮತ್ತು ನಮ್ಮ ಮೂಲಕ ನವೀನ ಮತ್ತು ಹೊಸ ರೀತಿಗಳಲ್ಲಿ ಕಾರ್ಯ ಮಾಡುತ್ತಾನೆ.

## ಸಮಸ್ಯೆ ಬಗೆ ಹರಿಸಲು ಜ್ಞಾನ - ಯೋಸೇಫನು

**ದೇವರು ತಾನು ಮಾಡಬೇಕೆಂದಿರುವುದನ್ನು ತಮಗೆ ತಿಳಿಸಿದ್ದಾನೆಂಬುದಾಗಿ ನಾನು ಅರಿಕೆ ಮಾಡಿದೆನಷ್ಟೆ. ಕೇಳಯ್ಯಾ, ಐಗುಪ್ತ ದೇಶದಲ್ಲೆಲ್ಲಾ ಬಹುವಿಶೇಷವಾದ ಏಳು ಸುಭಿಕ್ಷ ವರುಷಗಳೂ ಬರುವವು. ಆಗ ಐಗುಪ್ತದೇಶದವರು ಮೊದಲಿದ್ದ ಸುಭಿಕ್ಷವನ್ನು ಮರೆತುಬಿಡುವರು; ಆ ಬರದಿಂದ ದೇಶವು ಹಾಳಾಗಿ ಹೋಗುವುದು. ಮುಂದೆ ಬರುವ ಕ್ಷಾಮವು ಅತ್ಯಂತ ಘೋರವಾಗಿರುವುದರಿಂದ ಮೊದಲಿದ್ದ ಸಮೃದ್ಧಿಯ ಗುರುತೇ ಕಾಣಿಸದೇ ಹೋಗುವದು. ಫರೋಹನಿಗೆ ಕನಸು ಎರಡು ವಿಧವಾಗಿ ಬಿದ್ದದ್ದರಿಂದ ದೇವರು ಈ ಕಾರ್ಯವನ್ನು ನಿಶ್ಚಯಿಸಿ ಇದನ್ನು ಬೇಗ ಮಾಡುವನೆಂಬುದಾಗಿ ತಿಳುಕೊಳ್ಳಬೇಕು. ಆದದ್ದರಿಂದ ತಾವು ವಿವೇಕಿಯೂ ಬುದ್ಧಿವಂತನೂ ಆಗಿರುವ ಪುರುಷನನ್ನು ಆರಿಸಿಕೊಂಡು ಅವನನ್ನು ಐಗುಪ್ತ ದೇಶದ ಮೇಲೆ ಅಧಿಕಾರಿಯಾಗಿ ನೇಮಿಸಬೇಕು ಮತ್ತು ತಾವು ಒಂದು ಕೆಲಸ ಮಾಡಬೇಕು. ದೇಶದ ಎಲ್ಲಾ ಭಾಗಗಳಲ್ಲಿಯೂ ಕರಣೀಕರನ್ನು ನೇಮಿಸಿ ಅವರ ಕೈಯಿಂದ ಸುಭಿಕ್ಷವಾದ ಏಳು ವರುಷಗಳಲ್ಲಿ ದೇಶದ ಬೆಳೆಯೊಳಗೆ ಐದನೆಯ ಪಾಲನ್ನು ಕಂದಾಯವಾಗಿ ಎತ್ತಿಸಬೇಕು ಅವರು ಮುಂದಣ ಒಳ್ಳೇ ವರುಷಗಳಲ್ಲಿ ಆಹಾರ ಪದಾರ್ಥಗಳನ್ನೂ ದವಸಧಾನ್ಯಗಳನ್ನೂ ಕೂಡಿಸಿ ಫರೋಹನ ವಶದೊಳಗೆ ಪಟ್ಟಣಗಳಲ್ಲಿಟ್ಟು ಜೋಪಾನ ಮಾಡಲಿ ಆ ಆಹಾರ ಪದಾರ್ಥಗಳನ್ನು ಇಟ್ಟು ಕೂಡಿಸಿಕೊಳ್ಳುವದರಿಂದ ಐಗುಪ್ತ ದೇಶದಲ್ಲಿ ದುರ್ಭಿಕ್ಷವುಂಟಾಗುವ ಏಳು ವರುಷಗಳಲ್ಲಿ ಜನರು ಕ್ಷಾಮದಿಂದ ಸಾಯುವುದಿಲ್ಲ ಎಂದು ಹೇಳಿದನು. ಆ ಮಾತು ಫರೋಹನಿಗೂ ಅವನ ಪರಿವಾರದವರಿಗೂ ಒಳ್ಳೆಯದಾಗಿ ತೋಚಿದ್ದರಿಂದ ಫರೋಹನು ತನ್ನ ಪರಿವಾರದವರಿಗೆ - ಈತನಲ್ಲಿ ದೇವರ ಆತ್ಮ ಉಂಟಲ್ಲ ; ಈತನಿಗಿಂತ ಯೋಗ್ಯನಾದ ಪುರುಷನು ನಮಗೆ ಸಿಕ್ಕಾನೇ ಎಂದು ಹೇಳಿ ಯೋಸೇಫನಿಗೆ ದೇವರು ಇದನ್ನೆಲ್ಲಾ ನಿನಗೇ ತಿಳಿಸಿರುವದರಿಂದ ನಿನಗೆ ಸಮಾನನಾದ ಬುದ್ಧಿ ವಿವೇಕಗಳುಳ್ಳ ಪುರುಷನು ಯಾವನೂ ಇಲ್ಲ. ನೀನೇ ಅರಮನೆಯಲ್ಲಿ ಸರ್ವಾಧಿಕಾರಿಯಾಗಿರಬೇಕು; ನಿನ್ನ ಅಪ್ಪಣೆಯ ಮೇರೆಗೆ ಪ್ರಜೆಗಳೆಲ್ಲರೂ ನಡೆದುಕೊಳ್ಳಬೇಕು. ಸಿಂಹಾಸನದ ವಿಷಯದಲ್ಲಿ ಮಾತ್ರ ನಾನು ನಿನಗಿಂತ ದೊಡ್ಡವನಾಗಿರುವೆನು ಎಂದು ಹೇಳಿದನು.** (ಆದಿಕಾಂಡ 41 : 28-40).

ಯೋಸೇಫನು ಫರೋಹನ ಕನಸುಗಳನ್ನು ಅರ್ಥ ವಿವರಣೆ ಮಾಡಿ ಹೇಳಿದ್ದು ಮತ್ತು ಏಳು ವರ್ಷಗಳ ದುರ್ಭಿಕ್ಷವುಂಟಾಗುವ ಮತ್ತು ಅದರ ಮೊದಲು ಏಳು ವರುಷಗಳ ಸುಭಿಕ್ಷವಾದ ವರುಷಗಳ ಕುರಿತು ವಿವರಣೆ ನೀಡಿದ್ದು ಮತ್ತು ಅವನು ಅದನ್ನು ಅಲ್ಲಿಗೆ ನಿಲ್ಲಿಸದೆ ಏಳು ವರುಷಗಳು ದೇಶದಲೆಲ್ಲಾ ಬರಲಿರುವ ತೊಂದರೆ ಕುರಿತು ಮಾತ್ರವೇ ಪ್ರವಾದಿಸದೆ ಆ ತೊಂದರೆಗೆ ಪರಿಹಾರವನ್ನು ಸಹ ಒದಗಿಸಿದ್ದು ಇಲ್ಲಿಯ ವಿಶೇಷ. ಅವನು ಸಮಸ್ಯೆಯನ್ನು ಪರಿಹರಿಸುವ ತಂತ್ರವನ್ನು ಸಹ ತಿಳಿಸಿಕೊಟ್ಟನು! ಅದೇ ದೇವರು ಯೋಸೇಫನು ಕನಸುಗಳ ಅರ್ಥವಿವರಣೆ ನೀಡಲು

ಸಮರ್ಥಗೊಳಿಸಿದನು ಮತ್ತು ಸಮಸ್ಯೆಗೆ ಪರಿಹಾರವನ್ನು ಒದಗಿಸಲು ಜ್ಞಾನವನ್ನು ಕೊಟ್ಟನು. ದೇವರು ಅನುಮಾನವಿಲ್ಲದೆ ಯೋಸೇಫನ ಜೊತೆಯಲಿದ್ದನು. (ಆದಿಕಾಂಡ 39:2) ಯೋಸೇಫನನ್ನು ''ಗ್ರಹಿಸುವ ಮತ್ತು ಜ್ಞಾನಿ'' ಯಾಗಿ ಮಾಡಿದ್ದು ಅವನ ಜೀವಿತಕ್ಕೆ ದೇವರು ಹಂಚಿ ಕೊಟ್ಟಂತಹದ್ದಾಗಿದೆ. ಜ್ಞಾನದ ಆತ್ಮನು ಕಾರ್ಯನಿರತನಾಗಿದ್ದಾನೆ. ಎಂಬುದಕ್ಕೆ ಇದು ಒಂದು ಉದಾಹರಣೆಯಾಗಿದೆ. ಆತನು ನಮಗೆ ಮುಂಬರುವ ಘಟನೆಗಳ ಕುರಿತು ತಿಳುವಳಿಕೆಯನ್ನು ಕೊಡುವುದು ಮಾತ್ರವಲ್ಲದೇ, ಬರಲಿರುವ ಸಮಸ್ಯೆಯ ದೃಢ ಕಾರ್ಯರೂಪಕ ಪರಿಹಾರಗಳನ್ನು ಸಹ ಕೊಡುತ್ತಾನೆ. ನಾವು ಅಧಿಕವಾಗಿ ಜ್ಞಾನದ ಆತ್ಮನ ಮೇಲೆ ಅವಲಂಬಿಸಿದರೆ, ನಾವು ಅಧಿಕವಾಗಿ ಸೂಕ್ಷ್ಮ ವಿವೇಚನೆ ಮತ್ತು ದೂರದೃಷ್ಟಿಯಲ್ಲಿ ನಡೆಯಲು ಶಕ್ತಿಗೊಳ್ಳುತ್ತೇವೆ.

## ಪ್ರವೀಣ ಮತ್ತು ಕಲಾನೈಪುಣ್ಯದ ಕೆಲಸಗಳಿಗಾಗಿ ಜ್ಞಾನ - ದೇವ ದರ್ಶನ ಗುಡಾರದ ಕೆಲಸಗಾರರು

**''ಯೆಹೋವನು ಮೋಶೆಗೆ ಹೀಗೆಂದನು ವಿಚಿತ್ರವಾಗಿ ನಯವಾದ ಕೆಲಸಗಳನ್ನು ಕಲ್ಪಿಸುವುದಕ್ಕೂ ಚಿನ್ನ ಬೆಳ್ಳಿ ತಾಮ್ರಗಳಿಂದ ಕೆಲಸನಡಿಸುವುದಕ್ಕೂ ರತ್ನಗಳನ್ನು ಕೆತ್ತುವುದಕ್ಕೂ ಮರದಲ್ಲಿ ವಿಚಿತ್ರವಾಗಿ ಕೆತ್ತನೇ ಕೆಲಸವನ್ನು ಮಾಡುವುದಕ್ಕೂ ಇವೇ ಮೊದಲಾದ ಸಮಸ್ತ ಶೃಂಗಾರವಾದ ಕೆಲಸವನ್ನು ಮಾಡುವುದಕ್ಕೂ ನಾನು ಯೆಹೂದ ಕುಲದವನಾದ ಹೊರೆನ ಮೊಮ್ಮಗನೂ ಊರಿಯ ಮಗನೂ ಆಗಿರುವ ಬೆಚಲೇಲನೆಂಬವನನ್ನು ಗೊತ್ತು ಮಾಡಿದ್ದೇನೆ. ಅವನಿಗೆ ದಿವ್ಯಾತ್ಮವನ್ನು ಕೊಟ್ಟು ಬೇಕಾದ ಜ್ಞಾನ ವಿದ್ಯಾವಿವೇಕಗಳನ್ನೂ ಸಕಲ ಶಿಲ್ಪಾಶಾಸ್ತ್ರಜ್ಞಾನವನ್ನೂ ಅನುಗ್ರಹಿಸಿದ್ದೇನೆ. ಎಂದು ಹೇಳಿದನು.** (ವಿಮೋಚನಕಾಂಡ 31:1-5)

ದೇವ ಜನರು ಐಗುಪ್ತದಿಂದ ವಾಗ್ದಾನ ಮಾಡಿದ ದೇಶಕ್ಕೆ ಪ್ರಯಾಣಮಾಡುತ್ತಿರುವಾಗ ದೇವದರ್ಶನ ಗುಡಾರ ನಿರ್ಮಿಸಲು ಕೆಲಸಗಾರರ ಅಗತ್ಯತೆ ಇದ್ದ ಸಮಯದಲ್ಲಿ ದೇವರು ಬೆಚಲೇಲನೆಂಬುವನನ್ನು ಆರಿಸಿಕೊಂಡನು ಮತ್ತು ಅವನನ್ನು ಪವಿತ್ರಾತ್ಮನಿಂದ ತುಂಬಿಸಿದನು. ದೇವರ ಆತ್ಮನು ಬೆಚಲೇಲನಿಗೆ ಗುಡಾರದ ನಿರ್ಮಾಣದಲ್ಲಿ ಕಲಾತ್ಮಕ ವಸ್ತುಗಳನ್ನು ನಿರ್ಮಿಸಲು ಮತ್ತು ರಚಿಸಲು ಮತ್ತು ಕುಶಲಕಾರ್ಯದಲ್ಲಿ ನಿಪುಣನಾಗುವಂತೆ ''ವಿವೇಕ, ದಕ್ಷತೆ ಮತ್ತು ಕೌಶಲ್ಯದಲ್ಲಿ'' ಪಾಲುಕೊಟ್ಟನು. ಅದ್ಭುತಕರ! ಪವಿತ್ರಾತ್ಮನು ಮನುಷ್ಯನಿಗೆ ಕಲಾನೈಪುಣ್ಯ ಕೌಶಲ್ಯತೆ ಮತ್ತು ದಕ್ಷತೆಯ ಪಾಲು ಕೊಟ್ಟನು! ಇಂದಿನ ದಿನಗಳಲ್ಲಿ ಕೂಡ ನಮಗಾಗಿ ಜ್ಞಾನದ ಆತ್ಮನು ಇದನ್ನು ಮಾಡಲು ಶಕ್ತನಾಗಿದ್ದಾನೆ. ಇದು ಚಿನ್ನ ಮತ್ತು ಬೆಳ್ಳಿಯೊಡನೆ

ಕೆಲಸ ಮಾಡುವುದಲ್ಲ, ಕಾಲಾನೈಪುಣ್ಯದ ದಕ್ಷತೆಯನ್ನು ಅನೇಕ ವಿಭಿನ್ನ ರೀತಿಗಳಲ್ಲಿ ವ್ಯಕ್ತಪಡಿಸಬಹುದು. ಅಲ್ಲದೆ ಇದು ಬರೀ ಕಲಾ ನೈಪುಣ್ಯದ ಕೌಶಲ್ಯತೆಗೆ ಮಾತ್ರವೇ ಸೀಮಿತವಾಗಿಲ್ಲ ಆದರೆ ಸಾಮಾನ್ಯವಾಗಿ ಎಲ್ಲಾ ವಿಧದ ಕೌಶಲ್ಯತೆಯಾಗಿದೆ (ವಿಷಯಗಳನ್ನು ಮಾಡಲು ದಕ್ಷತೆ). ಉತ್ತಮ ವೈದ್ಯನಾಗಲೂ ಕೌಶಲ್ಯ, ಒಳ್ಳೆ ಆಹಾರ ಸಿದ್ಧಮಾಡಲು, ಕೌಶಲ್ಯ, ಉತ್ತಮ ಕಂಪ್ಯೂಟರ್ ಸೂಚಿಪತ್ರಗಳನ್ನು ಬರೆಯಲು ಕೌಶಲ್ಯ, ಬರವಣಿಗೆಯ ಕೌಶಲ್ಯ, ಮಾತನಾಡಲು ಕೌಶಲ್ಯ ಮುಂತಾದವುಗಳಲ್ಲಿ ಕೌಶಲ್ಯತೆ ಅವಶ್ಯವಾಗಿದೆ. ಜ್ಞಾನದ ಆತ್ಮನು ನಮ್ಮ ಜೀವಿತಗಳಲ್ಲಿ ಕೌಶಲ್ಯತೆ, ದಕ್ಷತೆ ಮತ್ತು ವಿವೇಕಗಳನ್ನು ಹಂಚಿ ಕೊಡುತ್ತಾನೆ.

ಪವಿತ್ರಾತ್ಮನ ಕೆಲಸಗಳ ಬಗ್ಗೆ ತಪ್ಪು ಅಭಿಪ್ರಾಯ ಆಗದಂತೆ ಈಗ ಈ ಚಿತ್ರಣವನ್ನು ತಿಳಿಯಲೆತ್ನಿಸಿರಿ, ಇಲ್ಲಿ ಬೆಚಲೇಲನು ಜ್ಞಾನದ ಆತ್ಮದಿಂದ ತುಂಬಿದ ಮನುಷ್ಯನಾಗಿದ್ದಾನೆ. ಅವನ ಉಪಕರಣಗಳೊಡನೆ ಬಿಸಿಯಾದ ಸೂರ್ಯನ ತಾಪದ ಮರುಭೂಮಿಯ ಡೇರೆಯ ಕೆಳಗೆ ಕುಳಿತು ಬೆವರು ಸುರಿಸುತ್ತಾ ಮತ್ತು ವಾಸನೆಯಿಂದ ಕೆಲಸ ಮಾಡುತ್ತಿರುವುದನ್ನು ನೀವು ನೋಡಬಹುದಾ? ಇಲ್ಲಿ ಅರ್ಥ ಮಾಡಿಕೊಳ್ಳಬೇಕಾದ ಅಂಶವೇನು? ಪವಿತ್ರಾತ್ಮನು ನಮ್ಮೊಳಗೆ ಕಾರ್ಯನಿರತನಾಗಿರುವುದರಿಂದ ನಾವು ಕೆಲಸ ಮಾಡಬಾರದು ಮತ್ತು ಪರಿಶ್ರಮದಿಂದ ಕೆಲಸ ಮಾಡಬಾರದು ಎಂದು ಇದರ ಅರ್ಥವಲ್ಲ! ದೇವರ ಆತ್ಮನು ನಮಗೆ ಜ್ಞಾನ, ಕೌಶಲ್ಯತೆ ದಕ್ಷತೆ ಮತ್ತು ವಿವೇಕಗಳನ್ನು ಕೊಡುವಾತನಾಗಿದ್ದಾನೆ, ಆದರೆ ನಾವು ಬೆವರು ಸುರಿಸಿ, ಕಷ್ಟಪಟ್ಟು ಕೆಲಸ ಮಾಡಿ ಮುಗಿಸಬೇಕು! ಅಲ್ಲಿ ಸೋಮಾರಿತನಕ್ಕೆ ಅವಕಾಶವಿರುವುದಿಲ್ಲ.

## ಬೋಧಿಸಲು ಮತ್ತು ಉಪದೇಶಿಸಲು ಜ್ಞಾನ - ಬೆಚಲೇಲನು

**ಬೆಚಲೇಲನು ಮತ್ತು ಮೋಶೆಯು ಇಸ್ರಾಯೇಲ್ಯರಿಗೆ ಹೀಗೆಂದನು ವಿಚಿತ್ರನಾಗಿ ನಯವಾದ ಕೆಲಸಗಳನ್ನು ಕಲ್ಪಿಸುವುದಕ್ಕೂ ಚಿನ್ನ ಬೆಳ್ಳಿ ತಾಮ್ರಗಳಿಂದ ಕೆಲಸನಡಿಸುವುದಕ್ಕೂ ರತ್ನಗಳನ್ನು ಕೆತ್ತುವುದಕ್ಕೂ ಮರದಲ್ಲಿ ವಿಚಿತ್ರವಾಗಿ ಕೆತ್ತನೆ ಕೆಲಸವನ್ನು ಮಾಡುವುದಕ್ಕೂ ಬೇರೆ ಸಕಲವಿಧವಾದ ಶೃಂಗಾರವಾದ ಕೆಲಸವನ್ನು ಮಾಡುವದಕ್ಕೂ ಯೆಹೋವನು ಯೆಹೂದಕುಲದವನಾದ ಹೂರನ ಮೊಮ್ಮಗನೂ ಊರಿಯ ಮಗನೂ ಆಗಿರುವ ಬೆಚಲೇಲನೆಂಬುವನನ್ನು ಗೊತ್ತಾಗಿ ನೇಮಿಸಿ ಅವನಿಗೆ ದಿವ್ಯಾತ್ಮನನ್ನು ಕೊಟ್ಟು ಬೇಕಾದ ಜ್ಞಾನ ವಿದ್ಯಾವಿವೇಕಗಳನ್ನೂ ಸಕಲ ಶಿಲ್ಪಶಾಸ್ತ್ರ ಜ್ಞಾನವನ್ನು ಅನುಗ್ರಹಿಸಿದ್ದಾನೆ. ಅದಲ್ಲದೆ ಮತ್ತೊಬ್ಬರಿಗೆ ಕಲಿಸಿಕೊಡುವುದಕ್ಕೆ ಸಹ ಅವನಿಗೂ ದಾನ್ ಕುಲದ ಅಹೀಸಾಮಾಕನ ಮಗನಾದ ಒಹೋಲೀಯಾಬನಿಗೂ ವರಕೊಟ್ಟಿದ್ದಾನೆ.** (ವಿಮೋಚನಕಾಂಡ 35:30-34)

ದೇವರ ಆತ್ಮನು ಬೆಚಲೇಲನಿಗೆ ಕಲಾನೈಪುಣ್ಯದ ದಕ್ಷತೆ ಮತ್ತು ಕೌಶಲ್ಯತೆಗಳನ್ನು ಹಂಚಿಕೊಟ್ಟದ್ದು ಮಾತ್ರವಲ್ಲದೆ ''ಇತರರಿಗೆ ಬೋಧಿಸುವ ದಕ್ಷತೆಯನ್ನು'' ಸಹ ಕೊಟ್ಟನೆಂಬುದನ್ನು ಆಸಕ್ತಿಯಿಂದ ಗುರುತಿಸಬಹುದಾಗಿದೆ. ನಾವು ಹೊಂದಿರುವಂತಹ ವಿವೇಕ ಮತ್ತು ಕೌಶಲ್ಯಗಳನ್ನು ಉಪಯೋಗಿಸುವುದು ಬಹಳ ಮುಖ್ಯವಾದದೂ ಅನೇಕರು ತಾವು ಹೊಂದಿರುವ ವಿವೇಕ ಮತ್ತು ದಕ್ಷತೆಯಲ್ಲಿ ಕೆಲಸ ಮಾಡಲು ಬಹಳ ಉತ್ತಮವಾಗಿದ್ದಾರೆ.ಹಾಗಿದ್ದರೂ ಇದು ಸಂಪೂರ್ಣವಾಗಿ ಬೇರೆಯವರನ್ನು ತರಭೇತಿಗೊಳಿಸುವ ಮತ್ತು ಬೇರೊಬ್ಬರಿಗೆ ಅದನ್ನು ಕಲಿಸಿ ಕೊಡುವ ಕೌಶಲ್ಯತೆಗಿಂತ ಭಿನ್ನವಾದುದಾಗಿದೆ. ಅನೇಕರು ಅದನ್ನು ಮಾಡಲು ಸಮರ್ಥರಾಗಿರುವುದಿಲ್ಲ! ಇಲ್ಲಿ ಪವಿತ್ರಾತ್ಮನು ಬೆಚಲೇಲನು ಮತ್ತು ಒಹೊಲೀಯೊಬನಿಗೆ ಅತ್ಯಂತ ದಕ್ಷತೆ ಕೊಟ್ಟಿದ್ದನು ನಾವು ನೋಡುತ್ತೇವೆ. ಅದು ಬೋಧಿಸುವ, ತರಭೇತಿಗೊಳಿಸುವ ಮತ್ತು ಉಪದೇಶಿಸುವ ದಕ್ಷತೆಯಾಗಿತ್ತು ಮತ್ತು ತಾವು ಪಡೆದುಕೊಂಡ ಜ್ಞಾನ ಮತ್ತು ಕೌಶಲ್ಯಗಳನ್ನು ಇತರರಿಗೆ ಕಲಿಸಿಕೊಡುವಿಕೆಯ ದಕ್ಷತೆಯಾಗಿತ್ತು. ಅದೇ ಜ್ಞಾನದ ಆತ್ಮನು ಅದನ್ನು ಮಾಡಲು ಅವರನ್ನು ಶಕ್ತಗೊಳಿಸಿದ್ದನು ಜ್ಞಾನದ ಆತ್ಮನು ನಮ್ಮನ್ನು ಸಹ ''ಇತರರಿಗೆ ಬೋಧಿಸುವ ದಕ್ಷತೆಯಿಂದ'' ಶಕ್ತಗೊಳಿಸುತ್ತಾನೆ.

## ನಾಯಕತ್ವಕ್ಕಾಗಿ ಜ್ಞಾನ – ಯೋಸೇಫ, ಮೊಶೆ, ಯೆಹೋಶುವ, ಸೊಲೊಮೋನ

**ಮೋಶೆಯು ನೂನನ ಮಗನಾದ ಯೆಹೋಶುವನ ಮೇಲೆ ಕೈಯಿಟ್ಟದ್ದರಿಂದ ಅವನು ಜ್ಞಾನವರ ಸಂಪನ್ನನಾದನು. ಯೆಹೋವನು ಮೋಶೆಗೆ ಕೊಟ್ಟ ಆಜ್ಞೆಗೆ ಅನುಸಾರವಾಗಿ ಇಸ್ರಾಯೇಲ್ಯರು ಯೆಹೋಶುವನ ಮಾತಿನ ಪ್ರಕಾರ ನಡೆದರು** (ಧರ್ಮೋಪದೇಶಕಾಂಡ 34:9)

**ನಿನ್ನ ಪ್ರಜೆಯಾದ ಈ ಮಹಾಜನಾಂಗವನ್ನು ಆಳುವುದಕ್ಕೆ ಸಮರ್ಥರಾರು! ನಾನು ಈ ಜನರ ನಾಯಕನಾಗಿ ಹೋಗುತ್ತಾ ಬರುತ್ತಾ ಇರುವದಕ್ಕೋಸ್ಕರ ನನಗೆ ಜ್ಞಾನವಿವೇಕಗಳನ್ನು ಅನುಗ್ರಹಿಸಬೇಕು ಎಂದು ದೇವರನ್ನು ಬೇಡಿಕೊಂಡನು. ಆಗ ದೇವರು ಸೊಲೊಮೋನನಿಗೆ – ನೀನು ಘನಧನೈಶ್ವರ್ಯಗಳನ್ನಾಗಲಿ ವೈರಿಗಳ ಪ್ರಾಣಹರಣವನ್ನಾಗಲಿ ದೀರ್ಘಾಯುಷ್ಯವನ್ನಾಗಲಿ ಕೇಳಿಕೊಳ್ಳದೆ ನಾನು ಯಾರ ಮೇಲೆ ನಿನ್ನನ್ನು ಅರಸನನ್ನಾಗಿ ಮಾಡಿದೆನೋ ಆ ನನ್ನ ಪ್ರಜೆಗಳನ್ನು ಪಾಲಿಸುವದಕ್ಕೊಸ್ಕರ ಜ್ಞಾನವಿವೇಕಗಳ ಮೇಲೆ ಮನಸಿಟ್ಟು ಅವುಗಳನ್ನು ಬೇಡಿಕೊಂಡದ್ದರಿಂದ ಅವು ನಿನಗೆ ದೊರಕುವವು. ಇದಲ್ಲದೆ ನಾನು ನಿನಗೆ ಘನಧನೈಶ್ವರ್ಯಗಳು ನಿನಗಿಂತ ಮೊದಲಿದ್ದ ಅರಸರಲ್ಲಿ ಯಾರಿಗೂ ಇರಲಿಲ್ಲ, ನಿನ್ನ ಅನಂತರದವರಿಗೂ ಇರುವದಿಲ್ಲ ಅಂದನು** (2 ಪೂರ್ವಕಾಲ ವೃತ್ತಾಂತ 1:10-12)

**ಇಸ್ರಾಯೇಲ್ಯರೆಲ್ಲರೂ ಅರಸನ ಈ ತೀರ್ಪನ್ನು ಕೇಳಿ ನ್ಯಾಯನಿರ್ಣಯಿಸುವುದಕ್ಕೆ ಈತನಲ್ಲಿ ದೇವಜ್ಞಾನವಿದೆ ಎಂದು ತಿಳಿದು ಅವನಿಗೆ ಬಹಳವಾಗಿ ಭಯಪಟ್ಟರು.** (1 ಅರಸುಗಳು 3:28)

ಜ್ಞಾನದ ಆತ್ಮನಿಂದಾಗಿ ಶ್ರೇಷ್ಟ ನಾಯಕರುಗಳಾದ, ಯೋಸೇಫ, ಮೋಶೆ ಮತ್ತು ಇತರೆ ದೇವಮನುಷ್ಯರುಗಳ ಉದಾಹರಣೆ ನಾವು ನೋಡುತ್ತೇವೆ. ಯೆಹೋಶುವನು ಮೋಶೆಯಿಂದ ನಾಯಕತ್ವದ ಹೊಣೆಯನ್ನು ಪಡೆದುಕೊಂಡಾಗ ಜ್ಞಾನದ ಆತ್ಮನು ಕೊಡಲ್ಪಟ್ಟನು. ಇದು ದೇವಜನರ ನಾಯಕನಾಗಿರಲೂ ಯೆಹೋಶುವನಿಗೆ ಅಗತ್ಯವಾಗಿದ್ದದು. ಸೊಲೊಮೋನನು ಆತನ ಜನರನ್ನು ಆಳಲು ಮತ್ತು ಪಾಲಿಸಲು ಜ್ಞಾನಕ್ಕಾಗಿ ಇಷ್ಟಪಟ್ಟಿದ್ದು ದೇವರಿಗೆ ಬಹಳ ಮೆಚ್ಚಿಕೆಯಾಯಿತು. ಒಬ್ಬನು ದೈವಿಕ ಮನುಷ್ಯನಾಗಲು ಮತ್ತು ಜಯಶಾಲಿ ನಾಯಕ ಜ್ಞಾನದ ಆತ್ಮನು ಶಕ್ತಗೊಳಿಸುತ್ತಾನೆ. ಇದು ಸಭೆಗೆ ಅಗತ್ಯವಾಗಿ ಬೇಕಾದದ್ದು., ಇದು ದೇಶಗಳು, ನಗರಸಭೆಗಳು ಮತ್ತು ಸಂಘಸಂಸ್ಥೆಗಳಿಗೂ ಅಗತ್ಯವಾಗಿರುವುಗಳಾಗಿವೆ.

ಜ್ಞಾನದ ಆತ್ಮನಿಂದ ತುಂಬಿದವರಾದ ನಾಯಕರ ಅವಶ್ಯಕತೆ ನಮಗಿದೆ ನೀವೇನಾದರೂ ನಾಯಕತ್ವದ ಒಂದು ಪಧವಿಯಲ್ಲಿ ಇದ್ದರೆ, ನಿಮಗೆ ಜವಾಬ್ದಾರಿಯನ್ನು ಯಶಸ್ವಿಯಾಗಿ ನೆರವೇರಿಸಲು ದೇವರ ಆತ್ಮವನ್ನು ಆತ್ಮನ ಜ್ಞಾನಕ್ಕಾಗಿ ಹುಡುಕುವುದನ್ನು ಕಲಿಯಿರಿ.

## ಬುದ್ಧಿವಂತ ವಿನ್ಯಾಸಕ್ಕಾಗಿ ಜ್ಞಾನ - ದಾವೀದ

**ತರುವಾಯ ದಾವೀದನು ತನ್ನ ಮಗನಾದ ಸೊಲೊಮೋನನಿಗೆ ದೇವಾಲಯದ ಮಂಟಪ ಕೊಟ್ಟಾರಗಳು, ಭಂಡಾರಗಳು, ಮೇಲುಪ್ಪರಿಗೆಗಳು, ಒಳಗಣ ಕೋಣೆಗಳು ಕೃಪಾಸನಮಂದಿರ ಇವುಗಳ ನಕ್ಷೆಯನ್ನು ಕೊಟ್ಟು, ಯೆಹೋವನ ಆಲಯದ ಅಂಗಳಗಳು, ಸುತ್ತಣ ಕೋಣೆಗಳು, ದೇವಾಲಯದ ಭಂಡಾರಗಳು ಪ್ರತಿಷ್ಟಿತ ವಸ್ತುಗಳ ಭಂಡಾರಗಳು ಇವುಗಳ ವಿಷಯವಾಗಿಯೂ ಕೆರೂಬಿವಾಹನದ ನಕ್ಷೆಯನ್ನು ಕೊಟ್ಟು ಆ ನಕ್ಷೆಗಳಲ್ಲಿ ಸೂಚಿಸಿದ ಎಲ್ಲಾ ಕೆಲಸಗಳ ವಿಷಯವಾದ ಜ್ಞಾನವು ತನಗೆ ಯೆಹೋವನ ಲೇಖನದಿಂದಲೇ ಪ್ರಾಪ್ತವಾಯಿತೆಂದು ಹೇಳಿದನು.** (1 ಪೂರ್ವಕಾಲವೃತ್ತಾಂತ 28:11,12,19).

ದೇವರನ್ನು ಆರಾಧಿಸಲು ದೇವಾಲಯವನ್ನು ಕಟ್ಟಬೇಕೆಂಬುದಾಗಿ ದಾವೀದನು ಇಚ್ಛೆ ಹೊಂದಿದ್ದನು. ಹಾಗಿದ್ದರೂ, ಅವನ ಮಗನಾದ ಸೊಲೊಮೋನನು ಅದನ್ನು ಕಟ್ಟಬೇಕೆಂಬುದಾಗಿ ಅದಕ್ಕೆ ಅಗತ್ಯವಾದ ಸಿದ್ಧತೆಗಳನ್ನು ಮಾತ್ರ ಮಾಡಿಕೊಡಬೇಕೆಂಬುದಾಗಿ ದೇವರು ದಾವೀದನಿಗೆ ಉಪದೇಶಿಸಿದನು. ದೇವಾಲಯ ನಿರ್ಮಾಣದ ಕೆಲಸದ ವಿಷಯದಲ್ಲಿ ದಾವೀದನು ಒಟ್ಟು ಸೇರಿಸಿದವುಗಳನ್ನು ಒಪ್ಪಿಸಲು ಸಿದ್ಧವಾಗುತ್ತಿರುವಾಗ ‘‘ಕರ್ತನ ದೇವಾಲಯದ, ಮಂಟಪದ ಬಗ್ಗೆ ಆತ್ಮನಿಂದ ಹೊಂದಿದ್ದ ಯೋಜನೆಗಳನ್ನು ಅವನು (ದಾವೀದನು) ಅವನಿಗೆ (ಸೊಲೊಮೋನ)

ಕೊಟ್ಟನು..'' ಎಂಬುದಾಗಿ ಸತ್ಯವೇದದ ವಚನಭಾಗವು ಹೇಳುವುದನ್ನು ಗಮನಿಸುವುದು ಅತೀ ಆಸಕ್ತಿಯುಂಟುಮಾಡುತ್ತದೆ. ''ಆ ನಕ್ಷೆಗಳಲ್ಲಿ ಸೂಚಿಸಿದ ಎಲ್ಲಾ ಕೆಲಸಗಳ ವಿಷಯವಾದ ಜ್ಞಾನವು ತನಗೆ ಯೆಹೋವನ ಲೇಖನದಿಂದಲೇ ಪ್ರಾಪ್ತನಾಯಿತೆಂದು'' ದಾವೀದನು ಹೇಳಿದ್ದನ್ನು ಗಮನಿಸಿರಿ. ಅತ್ಯದ್ಭುತ! ದೇವರ ಆತ್ಮನಿಂದ ದಾವೀದನಿಗೆ ದೇವಾಲಯದ ವಿನ್ಯಾಸವು ಕೊಡಲ್ಪಟ್ಟಿತ್ತು. ಹಳೇಒಡಂಬಡಿಕೆ ಅವಧಿಯಲ್ಲಿ ''ಕರ್ತನ ಹಸ್ತವು'' ಪವಿತ್ರಾತ್ಮನ ಚಲಿಸುವಿಕೆಯಾಗಿ ಪ್ರಾಸ್ತಾಪಿಸಲ್ಪಟ್ಟಿದೆ. ಅದೇ ಪವಿತ್ರಾತ್ಮನು ಅದೇ ಜ್ಞಾನದ ಆತ್ಮನು ಈ ದಿನದಲ್ಲಿ ಕಾರ್ಯನಿರತನಾಗಿದ್ದಾನೆ. ಆತನು ನಮ್ಮ ಮನಸ್ಸುಗಳಿಗೆ ವಿನ್ಯಾಸಗಳನ್ನು ಯೋಜನೆಗಳನ್ನು ಪ್ರಕೃತಿತೀತವಾಗಿ ಹಂಚಿಕೊಡಲು ಶಕ್ತನಾಗಿದ್ದಾನೆ.

## ಸ್ವಾಭಾವಿಕ ಸಂಪನ್ಮೂಲಗಳನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸಲು ಜ್ಞಾನ - ರೈತ

**ನನ್ನ ಧ್ವನಿಗೆ ಕಿವಿಗೊಟ್ಟು ಕೇಳಿರಿ, ನನ್ನ ಮಾತಿಗೆ ಗಮನವಿಟ್ಟು ಆಲಿಸಿರಿ ಬಿತ್ತನೆಗಾಗಿ ಉಳುವವನು ಸದಾ ಉಳುತ್ತಿರುವನೋ? (ಪ್ರತಿನಿತ್ಯವೂ) ಮಣ್ಣನ್ನು ಕೆಳಮೇಲು ಮಾಡುತ್ತಾ ಕುಂಟೆ ಹೊಡೆಯುವನೋ? ಅಂತು ಭೂಮಿಯನ್ನು ಹಸನು ಮಾಡಿದ ಮೇಲೆ ಕರಿಯ ಜೀರಿಗೆಯನ್ನು ಚೆಲ್ಲಿ ಜೀರಿಗೆಯನ್ನು ಬಿತ್ತಿ ಗೋದಿಯನ್ನು ಸಾಲು ಸಾಲಾಗಿಯೂ ಜವೆಗೋದಿಯನ್ನು ತಕ್ಕಸ್ಥಳದಲ್ಲಿಯೂ ಕಡಲೆಯನ್ನು ಅಂಚಿನಲ್ಲಿಯೂ ಹಾಕುವನಲ್ಲವೆ. ಅವನ ದೇವರು ಇದನ್ನೆಲ್ಲಾ ಅವನಿಗೆ ಸರಿಯಾಗಿ ಕಲಿಸಿ ತಿದ್ದುತ್ತಾನೆ. ಆದಕಾರಣ ಅವನು ಕರಿಯ ಜೀರಿಗೆಯನ್ನು ಒಕ್ಕುವುದು ಹಲಿವೆಯಿಂದಲ್ಲ, ಕೋಲಿನಿಂದಲೇ, ಜೀರಿಗೆಯನ್ನು ಒಕ್ಕುವುದು ಕಣದ ಗುಂಡಿನಿಂದಲ್ಲ, ದೊಣ್ಣೆಯಿಂದಲೇ, ಗೋದಿಯ ಕಾಳನ್ನು ನುಚ್ಚು ನುಚ್ಚು ಮಾಡುವನೋ? ತನ್ನ ಕುದುರೆಗಳನ್ನು ಹೊಡೆಯುತ್ತಾ ಗುಂಡನ್ನು ಗಿರ್ರನೆ ಉರುಳಿಸುತ್ತಾ ಯಾವಾಗಲೂ ಒಕ್ಕುತ್ತಿರುವದಿಲ್ಲ; ನುಚ್ಚು ನುಚ್ಚು ಮಾಡನು ಈ ವಿವೇಕವು ಸಹ ಅತಿಶಯಾಲೋಚನಾಪರನೂ ಸುಜ್ಞಾನ ಶ್ರೇಷ್ಟನೂ ಆಗಿರುವ ಸೇನಾಧೀಶ್ವರನಾದ ಯೆಹೋವನಿಂದಲೇ ಉಂಟಾಗುತ್ತದೆ.** (ಯೆಶಾಯ 28:23-29)

ರೈತನಿಗೆ, ಅವನ ಕೆಲಸದಲ್ಲಿ ಸಹಾಯ ಮಾಡಲು ಯಂತ್ರಗಳು ಇಲ್ಲದಿದ್ದಂತಹ ಹಿಂದಿನ ಸಮಯವನ್ನು ನೀವೇ ಕಲ್ಪಿಸಿಕೊಳ್ಳಿ ರೈತನು ಅವಶ್ಯವಾಗಿ ಮಾಡಬೇಕಾದುದೇನು ಎಂಬುದರ ಬಗ್ಗೆ ಹೇಗೆ ಜ್ಞಾನವನ್ನು ಹೊಂದಿದ್ದನು, ಬಿತ್ತನೆಗಾಗಿ ಭೂಮಿಯನ್ನು ಸಿದ್ದಗೊಳಿಸುವುದು ಹೇಗೆ ಧಾನ್ಯವನ್ನು ಸುಗ್ಗಿ ಮಾಡುವುದು ಎಂಬುದಾಗಿ ಹೇಗೆ ತಿಳಿದಿತ್ತು? ಈ ವಚನಭಾಗಗಳು ನಮಗೆ ಬೋಧಿಸುವುದುದೇನೆಂದರೆ ಸರ್ವಶಕ್ತನಾದ ಕರ್ತನು, ಸಲಹೆಗಳಲ್ಲಿ ಅತ್ಯದ್ಭುತನಾದವನು, ಜ್ಞಾನದಲ್ಲಿ ಭವ್ಯನಾದ ಕರ್ತನೇ,

ರೈತನು ಮಾಡಬೇಕಾದುದೇನು ಎಂಬುದನ್ನು ತಿಳಿದುಕೊಳ್ಳಲು ಶಕ್ತನಾಗುವಂತೆ ಮಾಡಿದ್ದಾನೆ. ಮತ್ತೊಂದು ಮಾತಿನಲ್ಲಿ ಹೇಳುವುದಾದರೆ ಸ್ವಾಭಾವಿಕ ಸಂಪನ್ಮೂಲಗಳನ್ನು ಉಪಯೋಗಿಸುವುದು ಹೇಗೆ ಎಂಬುದನ್ನು ರೈತನಿಗೆ ಕಲಿಸಿಕೊಟ್ಟವನು ದೇವರಾಗಿದ್ದಾನೆ. ಇಂತಹ ಬೇಸಾಯದ ವಿಷಯಾಂಶಗಳು ಈ ದಿನದಲ್ಲಿ ಸಾಮಾನ್ಯ ಜ್ಞಾನವಾಗಿರಬಹುದು. ಹಾಗಿದ್ದರೂ, ಶಕ್ತಿಯ ಹೊಸ ಸಂಪನ್ಮೂಲಗಳು, ಹೊಸ ರಾಸಾಯನಿಕಗಳು, ಹೊಸ ವೈಜ್ಞಾನಿಕ ಮತ್ತು ತಾಂತ್ರಿಕ ಪರಿಶೋಧನೆಗಳು ಮನುಷ್ಯನಿಗೆ ಅನೇಕ ಇತರ ಬಳಸದ ಸಂಪನ್ಮೂಲಗಳು ಇನ್ನೂ ಇವೆ. ಭೂಮಿಯ ಮೇಲಿರುವ ಸಂಪನ್ಮೂಲಗಳನ್ನು ಉಪಯೋಗಿಸುವುದು ಹೇಗೆ ಎಂಬುದನ್ನು ತಿಳಿಯಲು ಮತ್ತು ಪರಿಶೋಧಿಸಲು ದೇವರ ಜ್ಞಾನ ಮತ್ತು ಸಲಹೆಗಳನ್ನು ನಮ್ಮ ಜೀವಿತಗಳಲ್ಲಿ ಹಂಚಿಕೊಡಲು ಜ್ಞಾನದ ಆತ್ಮನಾಗಿರುವ ಪವಿತ್ರಾತ್ಮನು ಶಕ್ತನಾಗಿದ್ದಾನೆ.

## ಕಲಿಯುವುದಕ್ಕಾಗಿ ಜ್ಞಾನ - ದಾನಿಯೇಲನು ಮತ್ತು ಅವನ ಸ್ನೇಹಿತರು

**ಹೀಗಿರಲೂ ದೇವರು ಆ ನಾಲ್ಕು ಮಂದಿಯುವಕರಿಗೆ ಸಕಲಶಾಸ್ತ್ರಗಳಲ್ಲಿಯೂ ವಿದ್ಯೆಗಳಲ್ಲಿಯೂ ಜ್ಞಾನ ವಿವೇಕಗಳನ್ನು ದಯಪಾಲಿಸಿದನು. ದಾನಿಯೇಲನು ಸಮಸ್ತ ಸ್ವಪ್ನಗಳನ್ನೂ ದಿವ್ಯದರ್ಶನಗಳನ್ನೂ ಗಹಿಸುವುದರಲ್ಲಿ ಪ್ರವೀಣನಾದನು ರಾಜನು ನೇಮಿಸಿದ ಕಾಲವು ಕಳೆದು ಯುವಕರನ್ನು ಸನ್ನಿಧಿಗೆ ತರತಕ್ಕ ಸಮಯವು ಬಂದಾಗ ಕಂಚುಕಿಯರ ಅಧ್ಯಕ್ಷನು ಅವರನ್ನು ನೆಬೂಕದ್ನೆಚ್ಚರನ ಸಮ್ಮುಖಕ್ಕೆ ಕರೆತಂದನು. ರಾಜನು ಅವರ ಸಂಗಡ ಮಾತಾಡುವಾಗ ಆ ಸಮಸ್ತ ಯುವಕರಲ್ಲಿ ದಾನಿಯೇಲ, ಹನನ್ಯ, ಮೀಶಾಯೇಲ, ಅಜರ್ಯ, ಇವರ ಹಾಗೆ ಯಾರೂ ಕಂಡು ಬರಲಿಲ್ಲ, ಆದಕಾರಣ ಅವರು ರಾಜನ ಸನ್ನಿಧಿಸೇವಕರಾದರು. ಬಳಿಕ ರಾಜನು ಶಾಸ್ತ್ರೀಯ ವಿದ್ಯೆಯ ಸರ್ವವಿಷಯಗಳಲ್ಲಿ ಅವರನ್ನು ವಿಚಾರ ಮಾಡಲು ಅವನ ಪೂರ್ಣರಾಜ್ಯದಲ್ಲಿನ ಎಲ್ಲಾ ಜೋಯಿಸರಿಗಿಂತಲೂ ಮಂತ್ರವಾದಿಗಳಿಗಿಂತಲೂ ಹತ್ತರಷ್ಟು ನಿಪುಣರಾಗಿ ಕಂಡು ಬಂದರು. ದಾನಿಯೇಲನು ರಾಜನಾದ ಕೋರೆಷನ ಆಳ್ವಿಕೆ ಮೊದಲನೆಯ ವರುಷದ ತನಕ ಸನ್ನಿಧಿಸೇವಕನಾಗಿಯೇ ಇದ್ದನು.** (ದಾನಿಯೇಲ 1:17-20).

**ಆಗ ದಾನಿಯೇಲನನ್ನು ಸನ್ನಿಧಿಗೆ ಬರಮಾಡಲು ರಾಜನು ಅವನಿಗೆ ರಾಜನಾದ ನನ್ನ ತಂದೆಯು ಯೆಹೂದದಿಂದ ಕೈದಿಗಳಾಗಿ ತಂದು ಸೆರೆಮಾಡಿದ ಯೆಹೂದ್ಯರ ದಾನಿಯೇಲೆಂಬವನು ನೀನೋ? ದೇವರುಗಳ ಆತ್ಮವು ನಿನ್ನಲ್ಲಿ ನೆಲಸಿ ಪರಮಜ್ಞಾನವೂ ವಿವೇಕವೂ ಬುದ್ಧಿಪ್ರಕಾಶವೂ ನಿನಗುಂಟೆಂದು ಕೇಳಿದ್ದೇನೆ ಎಂದು ಹೇಳಿದನು.** (ದಾನಿಯೇಲ 5:13,14).

ಜ್ಞಾನದ ಆತ್ಮನು ನಮಗೆ ಸೂಕ್ಷ್ಮಪರಿಜ್ಞಾನ ಮತ್ತು ಕಲಿಯುವ ದಕ್ಷತೆಯನ್ನು ಕೊಡುತ್ತಾನೆ. ದೇವರು ತಾನೇ ದಾನಿಯೇಲನಿಗೆ ಅವನ ಸ್ನೇಹಿತರಿಗೂ ಜ್ಞಾನ, ತಿಳುವಳಿಕೆ

ಮತ್ತು ಕಲಿಯುಲು ದಕ್ಷತೆಯುನ್ನು ಕೊಟ್ಟಾತನಾಗಿದ್ದಾನೆ. ಇದು ಅವರು ಪ್ರವೀಣರಾಗುವಂತೆ ಮಾಡಿತು. ಹಿಂದೆ ಕಾರ್ಯಮಾಡಿದ ಪವಿತ್ರಾತ್ಮನು ನಮ್ಮ ಈ ದಿನಗಳಲ್ಲೂ ಕಾರ್ಯಮಾಡಲು ಶಕ್ತನಾಗಿದ್ದಾನೆ!

## ಬೋಧನೆಯ ಸೇವೆಯಲ್ಲಿ ಜ್ಞಾನ - ಯೇಸು

**ತರುವಾಯ ಆತನು ತನ್ನ ಊರಿಗೆ ಬಂದು ಅಲ್ಲಿರುವ ಸಭಾಮಂದಿರದಲ್ಲಿ ಜನರಿಗೆ ಉಪದೇಶಮಾಡುತ್ತಿದ್ದನು. ಅವರು ಕೇಳಿ ಅತ್ಯಾಶ್ಚರ್ಯಪಟ್ಟು ಇವನಿಗೆ ಈ ಜ್ಞಾನವೂ ಈ ಮಹತ್ಕಾರ್ಯಗಳೂ ಎಲ್ಲಿಂದ ಬಂದಿದ್ದಾವು ಎಂದು ಕೊಂಡರು** (ಮತ್ತಾಯ 13:54)

ಈ ಅಧ್ಯಾಯದ ಪ್ರಾರಂಭದಲ್ಲಿ ಕರ್ತನಾದ ಯೇಸುವಿನ ಭೂಲೋಕದ ಸೇವೆಯ ಅವಧಿಯಲ್ಲಿ ಆತ್ಮನ ಅಭಿಷೇಕವು ನೆಲೆಗೊಂಡಿದ್ದರ ಕುರಿತು ನಾವು ಓದುತ್ತೇವೆ. ಕರ್ತನಾದ ಯೇಸುವು ಬೋಧನೆಯಲ್ಲಿ ಪ್ರಸಂಗದಲ್ಲಿ ಮತ್ತು ಸ್ವಸ್ಥತೆ ಮಾಡುವುದರಲ್ಲಿ ನಡೆದನು. ಯೇಸುವಿನ ಬೋಧನೆಯ ಸೇವೆಯು ಜ್ಞಾನದಗುಣಲಕ್ಷಣದಿಂದ ಮತ್ತು ಅದ್ಭುತ ಬಲದ ಪ್ರದರ್ಶನದಿಂದ ಕೂಡಿತ್ತು. ಆದ್ದರಿಂದ ಇದು ನಮ್ಮ ದಿನಗಳಲ್ಲಿಯೂ ಸಹ ಇರಬೇಕು! ಬೋಧನೆಯ ಸೇವೆಗೆ ಕರೆಯಲ್ಪಟ್ಟಿರುವವರು ಆತ್ಮನ ಅಭಿಷೇಕದಿಂದ ತುಂಬಿದವರಾಗಿ ಅದ್ಭುತ ಸೂಚಕಕಾರ್ಯಗಳನ್ನು ಮತ್ತು ದೈವಿಕ ಜ್ಞಾನದ ತೋರ್ಪಡಿಸುವಿಕೆಯನ್ನು ಅಪೇಕ್ಷಿಸಬೇಕು.

## ಜ್ಞಾನವಾಕ್ಯದ ವರ

**ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿವೆ. ಒಬ್ಬನಿಗೆ ದೇವರಾತ್ಮನ ಮೂಲಕ ಜ್ಞಾನವಾಕ್ಯವು ಒಬ್ಬನಿಗೆ ಆ ಆತ್ಮನಿಗೆ ಅನುಗುಣವಾಗಿ ವಿದ್ಯಾವಾಕ್ಯವು** (1 ಕೊರಿಂಥದವರಿಗೆ 12:7,8).

ಪವಿತ್ರಾತ್ಮನ ಸೇವೆಯು ಸಭೆಯ ಮೂಲಕವಾಗಿ ಆತ್ಮನ ವರಗಳ ಮೂಲಕ ಬಿಡುಗಡೆಗೊಂಡಿರುವುದು ಒಂದು ವಿಷಯಾಂಶವಾಗಿದೆ. ಇಂತಹ ವರಗಳಲ್ಲಿ ಜ್ಞಾನವಾಕ್ಯವು ಸಹ ಪವಿತ್ರಾತ್ಮನ ಮೂಲಕ ಕೊಡಲ್ಪಟ್ಟಂತಹ ಒಂದು ವರವಾಗಿದೆ. ಇದು ಒಬ್ಬನು ಅಥವಾ ಅಧಿಕ ವ್ಯಕ್ತಿಗಳ ಲಾಭಕ್ಕಾಗಿ ವಿಶ್ವಾಸಿಗಳ ಜೀವಿತಕ್ಕೆ ದೈವಿಕ ಜ್ಞಾನದ ಹಂಚಿ ಕೊಡುವಿಕೆಯಾಗಿದೆ. ಜ್ಞಾನವಾಕ್ಯವು ಸಮಸ್ಯೆಗಳನ್ನು ಬಗೆಹರಿಸಲು, ನಾಯಕತ್ವದಲ್ಲಿ ತೀರ್ಮಾನಗಳನ್ನು ಮಾಡಲು, ಉಪದೇಶದಲ್ಲಿ ಸಹಾಯಮಾಡಲು ಇನ್ನೂ ಮುಂತಾದವುಗಳಿಗಾಗಿ ಕೊಡಲ್ಪಟ್ಟಿದೆ. ದೇವರ ಆತ್ಮನು, ಜ್ಞಾನವಾಕ್ಯವನ್ನು

ಹಂಚಿಕೊಡುವುದರಲ್ಲಿ ನಿರ್ದಿಷ್ಟ ಕ್ಷೇತ್ರಗಳೆಂಬ (ಸೇವೆ, ವ್ಯಾಪಾರ, ವಿಜ್ಞಾನ ಸಂಬಂಧಗಳು, ಅಡಿಗೆ ಮುಂತಾದವುಗಳು) ನಿರ್ಬಂಧ ಅಥವಾ ಪರಿಮಿತಿ ಇಲ್ಲಾ. ಈ ದಿನದ ಸಭೆಗಳಲ್ಲಿ ಜ್ಞಾನದ ಆತ್ಮನಾಗಿ, ದೇವರ ಆತ್ಮನು ಕಾರ್ಯನಿರತನಾಗಿದ್ದಾನೆ ಎಂಬುದು ನಮಗೆ ತಿಳಿದಿರುವುದಾಗಿದೆ ಮತ್ತು ನಮ್ಮ ಜೀವಿತಗಳಲ್ಲಿ ಆತನ ಕ್ರಿಯೆಗಳಿಗಾಗಿ ಆಸಕ್ತಿಯಿಂದ ಇಚ್ಛಿಸುವುದು ಅವಶ್ಯಕವಾಗಿದೆ.

## ಆತನನ್ನು ಉತ್ತಮವಾಗಿ ತಿಳಿಯಲು - ಜ್ಞಾನ

**ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು. ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ.** (ಎಫೆಸದವರಿಗೆ 1:17)

**ಲೋಕವು ಜ್ಞಾನವೆನಿಸುವ ಮಾರ್ಗದಿಂದ ದೇವರನ್ನು ತಿಳಿಕೊಳ್ಳದೆ ಹೋದದ್ದು** (1 ಕೊರಿಂಥವರಿಗೆ 1:21 ಅ)

ನಾವು ನಮ್ಮ ದೇವರನ್ನು ಅತ್ಯಂತ ನಿಕಟವಾಗಿ ತಿಳಿಯಲು ನಮಗೆ ಜ್ಞಾನದ ಆತ್ಮನು ಮತ್ತು ಪ್ರಕಟನೆಯ ಆತ್ಮನು ಅವಶ್ಯಕ. ಲೋಕಮಾರ್ಗದ ಜ್ಞಾನವು ನಮ್ಮನ್ನು ದೇವರೆಡೆಗೆ ನೆಡೆಸಲು ಅಸಮರ್ಥವಾಗಿದೆ. ಪವಿತ್ರಾತ್ಮನು ತರುವ ಪ್ರಕಟನೆ ಮತ್ತು ಜ್ಞಾನಕ್ಕೆ ನಮ್ಮ ಹೃದಯಗಳನ್ನು ನಿರಂತರವಾಗಿ ತೆರೆಯುವಾಗ ಆತನ ಜ್ಞಾನದಲ್ಲಿ ನಾವು ಆಳವಾಗಿ ಬೆಳೆಯುವೆವು.

## ಆತ್ಮನೊಡನೆ ಅನ್ಯೋನ್ಯವಾಗಿರುವುದು - ಕೀಲಿಕೈ

ನಮ್ಮ ಪ್ರತಿದಿನದ ಜೀವಿತಗಳಲ್ಲಿ ಆತನ ಸಂಪೂರ್ಣತೆಯಲ್ಲಿ ಆತನನ್ನು ಅನುಭವಿಸಲು ಪವಿತ್ರಾತ್ಮನು ಇಲ್ಲಿದ್ದಾನೆ. ನಾವು ಆತನ ಮೇಲೆ ಅವಲಂಬಿಸುವಾಗ ಮತ್ತು ಆತನು ಹಂಚಿಕೊಡುವವುಗಳ ಮೇಲೆ ಆಕರ್ಷಿತರಾಗುವಾಗ ನಮ್ಮ ಜೀವಿತಗಳಲ್ಲಿ ಆತನ ಅತ್ಯಧಿಕ ಕ್ರಿಯೆಗಳನ್ನು ನಾವು ಅನುಭವಿಸುತ್ತೇವೆ. ಪ್ರತಿಯೊಬ್ಬರ ಜೀವಿತಗಳಲ್ಲಿ ನಾವು ಯಾವುದನ್ನೂ ಮಾಡಲು ಕರೆಯಲ್ಪಟ್ಟಿದ್ದೇವೊ ಅದಕ್ಕನುಗುಣವಾಗಿ ಆತನು ವಿಭಿನ್ನವಾಗಿ ಕಾರ್ಯಮಾಡುತ್ತಾನೆ. ಕೆಲವರು ನಾಯಕತ್ವದ ಪದವಿಗಳಿಗಾಗಿ ಕರೆಯಲ್ಪಟ್ಟಿದ್ದಾರೆ. ಅವರು ತಮ್ಮ ಪಾತ್ರಗಳನ್ನು ನೆರವೇರಿಸಲು ಜ್ಞಾನದ ಆತ್ಮನು ಅವರಿಗೆ ಅಗತ್ಯ. ಇತರರು ಯಾವುದಾದರೊಂದನ್ನು ಮಾಡಲು ಕರಯಲ್ಪಟ್ಟಿದ್ದಾರೆ. ನಿಮ್ಮ ಕರೆ/ಪಾತ್ರ/ವೃತ್ತಿಯ ಅವಲಂಬನೆಯ ಮೇಲೆ, ನಿಮ್ಮನ್ನು ಜ್ಞಾನದ ಆತ್ಮನು

ಭಿನ್ನವಾಗಿ ಶಕ್ತಗೊಳಿಸುವುದು ನಿಮಗೆ ಅಗತ್ಯವಾಗಿದೆ. ಆದರೆ ಪ್ರತಿಯೊಬ್ಬರು ಆತನು ಹಂಚಿಕೊಡುವ ಜ್ಞಾನ ಮತ್ತು ದೇವರ ಆತ್ಮನ ಮೇಲೆ ಅವಲಂಬಿಸುವುದನ್ನು ಕಲಿಯುವುದು ಅವಶ್ಯಕ. ನಾವು ಆತನ ನಡೆಸುವಿಕೆಯಲ್ಲಿ ಫಲಕೊಡುವುದು, ನಮಗೆ ಬೇಕಾಗಿರುವ ಜ್ಞಾನಕ್ಕಾಗಿ ಆತನನ್ನು ಕೇಳುವುದು ಮತ್ತು ಆತನೊಂದಿಗೆ ಮಾತನಾಡುವುದು ಮತ್ತು ಆತನೊಡನೆ ದೃಢವಾದ ಅನ್ಯೋನ್ಯತೆಯಲ್ಲಿ ನಡೆಯುವುದು ಅಗತ್ಯವಾಗಿದೆ. ಆತನ ಚುರುಕಾದ ಕೆಲಸದ ತೊಡಗಿಸುವಿಕೆಗೆ ನಾವು ಹೆದರಬಾರದು. ಇದು ಒಂದು ಹೆಚ್ಚುಕಾಲದ ಅವಧಿಯಲ್ಲಿ ಕಟ್ಟಲ್ಪಡುವ ಸಂಬಂಧವಾಗಿದೆ. ಆತನನ್ನು ಅಧಿಕವಾಗಿ ತಿಳಿದರೆ, ನೀವು ಆತನನ್ನು ಅಧಿಕವಾಗಿ ಅನುಭವಿಸುತ್ತೀರಿ.

ನಿಮ್ಮ ಜೀವಿತದಲ್ಲಿ ಪವಿತ್ರಾತ್ಮನನ್ನು ಜ್ಞಾನದ ಆತ್ಮನಾಗಿ ಕಂಡುಹಿಡಿಯಿರಿ!

> **ನಾವು ಪವಿತ್ರಾತ್ಮನ ಮೇಲೆ ಅವಲಂಬಿಸಲು ಕಲಿಯುವಾಗ ಮತ್ತು ಆತನು ಹಂಚಿ ಕೊಡುವವುಗಳ ಮೇಲೆ ಆಕರ್ಷಿತರಾಗುವಾಗ, ನಮ್ಮ ಜೀವಿತಗಳಲ್ಲಿ ಆತನ ಅತ್ಯಧಿಕ ಕ್ರಿಯೆಗಳನ್ನು ನಾವು ಅನುಭವಿಸುತ್ತೇವೆ.** ಪ್ರತಿಯೊಬ್ಬರ ಜೀವಿತಗಳಲ್ಲಿ ನಾವು ಯಾವುದನ್ನೂ ಮಾಡಲು ಕರೆಯಲ್ಪಟ್ಟಿದ್ದೇವೊ ಅದಕ್ಕನುಗುಣವಾಗಿ ಆತನು ಭಿನ್ನವಾಗಿ ಕೆಲಸ ಮಾಡುತ್ತಾನೆ. ಆದರೆ **ಪ್ರತಿಯೊಬ್ಬರು ಆತನು ಪಾಲುಕೊಡುವ ಜ್ಞಾನ ಮತ್ತು ದೇವರ ಆತ್ಮನ ಮೇಲೆ ಅವಲಂಬಿತರಾಗುವುದನ್ನು ಕಲಿಯಬೇಕು.** ನಾವು **ಆತನೊಂದಿಗೆ ನಿಕಟವಾಗಿ ಅನ್ಯೋನ್ಯತೆಯಲ್ಲಿ ನಡೆಯುವುದು** ಅವಶ್ಯಕ.

# 2

# ಪ್ರಕಟನೆಯ ಆತ್ಮನು

## ರಹಸ್ಯಗಳನ್ನು ಪ್ರಕಟಿಸುವ ದೇವರು ಪರಲೋಕದಲ್ಲಿದ್ದಾನೆ

**ಆಗ ಆ ರಹಸ್ಯವು ರಾತ್ರಿಯ ಸ್ವಪ್ನದಲ್ಲಿ ದಾನಿಯೇಲನಿಗೆ ವ್ಯಕ್ತವಾಯಿತು. ಕೂಡಲೆ ದಾನಿಯೇಲನು ಪರಲೋಕ ದೇವರನ್ನು ಹೀಗೆ ಸ್ತುತಿಸಿದನು. ದೇವರ ನಾಮಕ್ಕೆ ಯುಗಯುಗಾಂತರಗಳಲ್ಲಿಯೂ ಕೊಂಡಾಟವಾಗಲಿ! ಜ್ಞಾನತ್ರಾಣಗಳು ಆತನವುಗಳೇ ಕಾಲಸಮಯಗಳನ್ನು ಮಾರ್ಪಡಿಸುತ್ತಾನೆ, ರಾಜರನ್ನು ತಳ್ಳುತ್ತಾನೆ. ನಿಲ್ಲಿಸುತ್ತಾನೆ. ಜ್ಞಾನಿಗಳ ಜ್ಞಾನವು, ವಿವೇಕಿಗಳ ವಿವೇಕವು ಆತನ ವರವೇ, ಆತನು ಅಗಾಧ ವಿಷಯಗಳನ್ನೂ ಗೂಢಾರ್ಥಗಳನ್ನೂ ಬೈಲಿಗೆ ತರುತ್ತಾನೆ. ಕಗ್ಗತ್ತಲೆಯಲ್ಲಿ ಅಡಗಿರುವದೂ ಆತನಿಗೆ ಗೋಚರ; ತೇಜಸ್ಸು ಆತನಲ್ಲೇ ನೆಲೆಗೊಂಡಿದೆ ನನ್ನ ಪಿತೃಗಳ ದೇವರೇ ನಿನ್ನನ್ನು ಸ್ತುತಿಸುತ್ತೇನೆ, ಕೊಂಡಾಡುತ್ತೇನೆ, ನೀನು ನನಗೆ ಜ್ಞಾನತ್ರಾಣಗಳನ್ನು ದಯಪಾಲಿಸಿ ನಾವು ಬೇಡಿದ್ದನ್ನು ನನಗೆ ತೋರ್ಪಡಿಸಿದಿಯಲ್ಲಾ. ಹೌದು, ರಾಜನ ರಹಸ್ಯವನ್ನು ನಮಗೆ ವ್ಯಕ್ತಗೊಳಿಸಿದಿ ಅದಕ್ಕೆ ದಾನಿಯೇಲನು ಸನ್ನಿಧಿಯಲ್ಲಿ ರಾಜನು ಕೇಳುವ ರಹಸ್ಯವನ್ನು ವಿದ್ವಾಂಸರಾಗಲಿ ಮಾಟಗಾರರಾಗಲಿ ಜೋಯಿಸರಾಗಲಿ ಶಕುನದವರಾಗಲಿ ಯಾರೂ ರಾಜನಿಗೆ ತಿಳಿಸಲಾರರು, ಆದರೆ ರಹಸ್ಯಗಳನ್ನು ವ್ಯಕ್ತಗೊಳಿಸುವ ಒಬ್ಬನಿದ್ದಾನೆ ಆತನು ದೇವರು; ಪರಲೋಕದಲ್ಲಿದ್ದಾನೆ.** (ದಾನಿಯೇಲನು 2:19-23,27,28ಎ)

ನೆಬೂಕದ್ನೆಚ್ಚರನು ಕಂಡಂತಹ ಕನಸನ್ನು ಅದರ ಅರ್ಥವನ್ನು ತಿಳಿಸುವಂತೆ ತನ್ನ ರಾಜ್ಯದಲ್ಲಿನ ಜೋಯಿಸರನ್ನೂ ಮಂತ್ರವಾದಿಗಳನ್ನೂ ಕರೆಯಿಸಿ ಒತ್ತಡ ಹಾಕಿದಾಗ ಅವರು ದಿಗಿಲುಗೊಂಡರು. ಯಾರೋ ಒಬ್ಬರು ಕಂಡ ಕನಸನ್ನು ಯಾವನಾದರೂ ತಿಳಿಯುವುದು ಹೇಗೆ ಸಾಧ್ಯವಾಗಿದೆ! ಆದರೆ ದಾನಿಯೇಲನು ತರುಣನಾದಾಗ್ಯೂ ಆತನ ದೇವರ ಬಗ್ಗೆ ತುಸು ತಿಳಿದವನಾಗಿದ್ದನು. ಪರಲೋಕದಲ್ಲಿರುವ ದೇವರು, ಸತ್ಯವೇದದ ದೇವರು, ''ಆಳವಾದ ಮತ್ತು ರಹಸ್ಯವಾದ ವಿಷಯಗಳನ್ನು ವ್ಯಕ್ತಪಡಿಸುತ್ತಾನೆ.'' ಮತ್ತು ಮನುಷ್ಯನಿಗೆ ಅಗೋಚರವಾಗಿರುವ ''ಕಗ್ಗತ್ತಲೆಯಲ್ಲಿ ಅಡಗಿರುವದೂ'' ದೇವರಿಗೆ ಗೋಚರ ಎಂಬುದಾಗಿ ದಾನಿಯೇಲನಿಗೆ ಗೊತ್ತಿತ್ತು. ಆತನಲ್ಲಿ ಕತ್ತಲೆಯನ್ನು ಬೆಳಗಿಸುವ ಬೆಳಕು ಮತ್ತು ರಹಸ್ಯಗಳನ್ನು ತೆರೆಯುವ ವಿಷಯಗಳಿವೆ. ದೇವರು ಸಮಯದಿಂದ ಸಮಯಕ್ಕೆ ಆತನ ಜನರು ಆಳವಾದ ಮತ್ತು ರಹಸ್ಯವಾದ ವಿಷಯಗಳನ್ನು ನೋಡುವಂತೆ ಅವರನ್ನು ಶಕ್ತಗೊಳಿಸಲು ಇಂತಹ ಬೆಳಕಿನ ಪಾಲುಕೊಡುತ್ತಾನೆ. ಆದ್ದರಿಂದ ದಾನಿಯೇಲನು, ಅವನ ಸ್ನೇಹಿತರೊಡನೆ

ಪ್ರಾರ್ಥಿಸಿದಾಗ, ದೇವರು ಅವರ ಪ್ರಾರ್ಥನೆಗಳಿಗೆ ಉತ್ತರಿಸಿ ಅವನು ಅಗತ್ಯವಾಗಿ ತಿಳಿಯಬೇಕಾಗಿದ್ದನ್ನು ವ್ಯಕ್ತಗೊಳಿಸಿದನು,

ದೇವರು ರಹಸ್ಯಗಳನ್ನು ಪ್ರಕಟ ಮಾಡುವವನಾಗಿದ್ದಾನೆ. ಪ್ರಸಕ್ತವಾಗಿ ಗೊತ್ತಿಲ್ಲದಿರುವುದರ ಮಾಹಿತಿಗಳ ಗುಟ್ಟು ಅಥವಾ ರಹಸ್ಯ ತಿಳಿಸುತ್ತಾನೆ. ದೇವರು ನಿಮಗೆ ರಹಸ್ಯಗಳನ್ನು ಪ್ರಕಟಪಡಿಸುತ್ತಾನೆ. ಆತನು ಗತಕಾಲದ, ಇಂದಿನ ಮತ್ತು ಭವಿಷ್ಯತ್ತಿನ ವಿಷಯಗಳ ಬಗ್ಗೆ ನಿಮಗೆ ಮಾಹಿತಿಗಳನ್ನು ಪ್ರಕಟ ಮಾಡುತ್ತಾನೆ. ದೇವರು ನಿಮಗೆ ಪ್ರಕಟಪಡಿಸುವ ಮಾಹಿತಿಗಳು ನಿಮ್ಮ ಜೀವಿತಗಳಿಗೆ ಮಾರ್ಗದರ್ಶನ ಮತ್ತು ಸಲಹೆಗಳನ್ನು ತರುತ್ತವೆ. ಇದು ವೈಯಕ್ತಿಕವಾಗಿ ನಿಮ್ಮನ್ನು ಅಥವಾ ಬೇರೊಬ್ಬರ ಮೇಲೆ ಪ್ರಭಾವಬೀರುವ ಮಾಹಿತಿಗಳಾಗಿರಬಹುದು. ದಾನಿಯೇಲನ ಉದಾಹರಣೆಯಲ್ಲಿ ದೇವರು ಭವಿಷ್ಯದಲ್ಲಿ ಮಾಡುವಂತಹ ವಿಷಯಗಳ ಕುರಿತು ಮಾಹಿತಿಯಾಗಿತ್ತು. ಯೇಸುವು ಬಾವಿಯ ಬಳಿಯಲ್ಲಿ ಸಮಾರ್ಯದ ಸ್ತ್ರೀಯೊಡನೆ ಮಾತನಾಡಿದಾಗ (ಯೋಹಾನ 4) ಇದು ಬೇರೊಬ್ಬರ ಜೀವಿತದಲ್ಲಿನ ರಹಸ್ಯ ಪಾಪಗಳ ಪ್ರಕಟನೆಯಾಗಿತ್ತು. ಆದ್ದರಿಂದ ತಿದ್ದುಪಡಿ ಮತ್ತು ಪಶ್ಚಾತ್ತಾಪ ತರುವುದು ಅಗತ್ಯವಾಗಿತ್ತು ಇದು ಯಾರೋ ಒಬ್ಬರ ಗುಣನಡತೆಯಲ್ಲಿ ಅವರು ಸತ್ಯವಾಗಿ ಏನಾಗಿದ್ದಾರೆ. ಎಂಬುದರ ಪ್ರಕಟನೆಯಾಗಿದೆ. ಯೇಸುವು ನತಾನಿಯೇಲನನ್ನು ಸಂಧಿಸಿದ್ದು ಇದಕ್ಕೆ ಉದಾಹರಣೆಯಾಗಿದೆ. ‘‘ಇಗೋ ಇವನು ನಿಜವಾದ ಇಸ್ರಾಯೇಲನು; ಇವನಲ್ಲಿ ಕಪಟವಿಲ್ಲ’’ ಎಂಬುದಾಗಿ ಯೇಸುವು ಹೇಳಿದನು. (ಯೋಹಾನ 1:47). ನತಾನಯೇಲನು ದಿಗಿಲುಪಟ್ಟವನಾಗಿ ನನ್ನನ್ನು ನೀನು ಹೇಗೆ ಬಲ್ಲೆ? ಎಂಬುದಾಗಿ ಕೇಳಿದ್ದನು. ದೇವರು ಇತರ ಜನರ ಆಲೋಚನೆಗಳನ್ನು ಮತ್ತು ಅಭಿಪ್ರಾಯಗಳನ್ನು ಪ್ರಕಟಮಾಡುತ್ತಾನೆ. ಉದಾಹರಣೆ: ‘‘ಅವರೊಳಗೆ ಅಂದುಕೊಳ್ಳುವುದನ್ನು ಕೂಡಲೇ ಯೇಸು ತನ್ನ ಆತ್ಮದಲ್ಲಿ ತಿಳಿದುಕೊಂಡನು’’ ಎಂಬುದಾಗಿ ಓದುತ್ತೇವೆ. (ಮಾರ್ಕ 2:8) ನಿಮ್ಮನ್ನು ಸಂರಕ್ಷಿಸಲು ನೀವು ವ್ಯವಹರಿಸುತ್ತಿರುವ ಜನರ ಯೋಜನೆಗಳು ಮತ್ತು ತಂತ್ರಗಳನ್ನು ದೇವರು ಪ್ರಕಟಪಡಿಸುತ್ತಾನೆ. ಉದಾಹರಣೆಗೆ ಪ್ರವಾದಿಯಾದ ಎಲೀಷನು ಇಸ್ರಾಯೇಲ್ಯರ ಅರಸನಿಗೆ ಆರಾಮ್ಯರ ಅರಸನ ಮೇಲೆ ಯುದ್ಧ ಯೋಜನೆಯ ಕುರಿತು, ಅರಸನು ಸಮಸ್ಯೆಯಿಂದ ದೂರ ಉಳಿದುಕೊಳ್ಳಲು ಸಹಾಯ ಮಾಡಲು ಎಚ್ಚರಿಕೆಗಳನ್ನು ಕೊಡುತ್ತಲೆ ಇದ್ದನು. ‘‘ಇದರ ದೆಸೆಯಿಂದ ಅರಾಮ್ಯರ ಅರಸನು ಕಳವಳಗೊಂಡು ತನ್ನ ಸೇನಾಪತಿಗಳನ್ನು ಕರೆದು ಅವರನ್ನು ನಮ್ಮವರಲ್ಲಿ ಇಸ್ರಾಯೇಲ್ಯರ ಅರಸನ ಪಕ್ಷದವರು ಯಾರು? ನನಗೆ ತಿಳಿಸುವದಿಲ್ಲವೋ ಎಂದು ಕೇಳಿದನು ಆಗ

ಅವರಲೊಬ್ಬನು ಅವನಿಗೆ ನನ್ನ ಒಡೆಯನಾದ ಅರಸೇ ಹಾಗಲ್ಲ, ಇಸ್ರಾಯೇಲ್ಯರಲ್ಲಿ ಎಲೀಷನೆಂಬೊಬ್ಬ ಪ್ರವಾದಿಯಿರುತ್ತಾನೆ; ನೀನು ನಿನ್ನ ಮಲಗುವ ಕೋಣೆಯಲ್ಲಿ ಆಡುವ ಮಾತುಗಳನ್ನು ಸಹ ಅವನು ಅರಿತುಕೊಂಡು ಎಲ್ಲವನ್ನೂ ಇಸ್ರಾಯೇಲ್ಯರ ಅರಸನಿಗೆ ತಿಳಿಸುತ್ತಾನೆ ಅಂದನು (2 ಅರಸುಗಳು 6:11,12) ಕಾಣದಿರುವಂತಹ ಆತ್ಮಿಕ ಲೋಕ ಮತ್ತು ಸ್ವಾಭಾವಿಕ ಲೋಕದಲ್ಲಿನ ವಿಷಯಗಳ ಕುರಿತು ದೇವರು ಪ್ರಕಟನೆಯನ್ನು ಕೊಡುತ್ತಾನೆ.

ಈ ಪುಸ್ತಕವು ನಮ್ಮ ಜೀವಿತಗಳಿಗೆ ಪವಿತ್ರಾತ್ಮನ ಕಾರ್ಯದಿಂದ ಪ್ರಕಟನೆಯನ್ನು ತರುವುದರಲ್ಲಿ ಕೇಂದ್ರೀಕೃತಗೊಂಡಿದೆ. ಪ್ರಕಟನೆಗೆ ಅಗತ್ಯವಾದದ್ದು ಮತ್ತು ಪ್ರಕಟನೆಯ ಆತ್ಮನಾಗಿ ಪವಿತ್ರಾತ್ಮನ ವಿವಿಧ ವಿಷಯಾಂಶಗಳೇನು ಎಂಬುದನ್ನು ನಾವು ವಿಚಾರ ಮಾಡುತ್ತೇನೆ. ನಿಮಗೆ ಪ್ರಕಟನೆಯ ಆತ್ಮನಾಗಿ ಪವಿತ್ರಾತ್ಮನು ನಿಮ್ಮ ಜೀವಿತಗಳಲ್ಲಿ ತರುವ ದೈವಿಕ ಪ್ರಕಟನೆಯನ್ನು ನೀವು ಅನುಭವಿಸುತ್ತೀರಿ ಎಂಬುದು ನಮ್ಮ ಅಪೇಕ್ಷೆಯಗಿದೆ.

## ಆತ್ಮನು ಬರುವಾಗ

**ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು. ತಂದೆಗೆ ಇರುವದೆಲ್ಲಾ ನನ್ನದು ಆದ್ದರಿಂದಲೇ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವನೆಂದು ಹೇಳಿದನು.** (ಯೋಹಾನ 16:13-15)

ಪವಿತ್ರಾತ್ಮನು ಪ್ರಕಟನೆಯ ಆತ್ಮನಾಗಿದ್ದಾನೆ. ಆತನು ನಮ್ಮ ಹೃದಯಗಳಿಗೆ ಸತ್ಯವನ್ನು ಪ್ರಕಟಮಾಡುತ್ತಾನೆ. ಆತನು ನಮ್ಮೊಂದಿಗೆ ಮಾತಾಡುತ್ತಾನೆ ಮತ್ತು ತಂದೆಯ ಹೃದಯವನ್ನು ತಿಳಿಸುತ್ತಾನೆ. ಕರ್ತನಾದ ಯೇಸುವು ನಮಗೆ ತಿಳಿಯಪಡಿಸಲು ಬಯಸುವುದನ್ನು ಪವಿತ್ರಾತ್ಮನು ನಮ್ಮೊಂದಿಗೆ ಮಾತಾನಾಡುತ್ತಾನೆ. ''ಇನ್ನೂ ಬರಬೇಕಾಗಿರುವ'' ವಿಷಯಗಳ ಬಗ್ಗೆಯೂ ನಮಗೆ ಆತನು ತಿಳಿಸುತ್ತಾನೆ. ಇವೆಲ್ಲವು ಪವಿತ್ರಾತ್ಮನ ಪ್ರಸಕ್ತ ಸಭಾ ಸೇವೆಯ ಭಾಗಗಳಾಗಿವೆ. ವಿಶ್ವಾಸಿಗಳಾಗಿ ದೇವರ ಆತ್ಮನು ನಮ್ಮ ಜೀವಿತಗಳಿಗೆ ತರುವ ಪ್ರಕಟನೆಗಳನ್ನು ನಾವು ಅಪೇಕ್ಷಿಸುವುದು ಅವಶ್ಯಕ ನಿಮ್ಮ ಜೀವನ ವೃತ್ತಿ, ನಿಮ್ಮ ಮದುವೆಗಳು, ಬೇರೆ ಸ್ಥಳಕ್ಕೆ ಚಲಿಸುವುದು ಮುಂತಾದವುಗಳಲ್ಲಿ ನೀವು ಎದುರಿಸುತ್ತಿರುವ ನಿರ್ದಿಷ್ಟ ವಿವಾದಾಂಶಗಳಲ್ಲಿ ದೇವರ ಹೃದಯದ ಕಾಳಜಿ

ಏನು ಎಂಬುದನ್ನು ಪ್ರಕಟಪಡಿಸುವಂತೆ ಪವಿತ್ರಾತ್ಮನನ್ನು ಕೇಳಿಕೊಳ್ಳಿರಿ. ತಂದೆಯು ನಿಮಗೋಸ್ಕರ ಸಿದ್ಧಗೊಳಿಸಿರುವ ವಿಷಯಗಳು, ಮತ್ತು ಭವಿಷ್ಯದಲ್ಲಿ ನಿಮಗಾಗಿ ಸಿದ್ಧ ಮಾಡಿರುವ ವಿಷಯಗಳ ಕುರಿತು ಪವಿತ್ರಾತ್ಮನು ನಿಮ್ಮೊಂದಿಗೆ ಮಾತಾನಾಡುವಂತೆ ಕೇಳಿಕೊಳ್ಳಿರಿ. ಪ್ರಕಟನೆಯ ಆತ್ಮನಾಗಿರುವ ಪವಿತ್ರಾತ್ಮನಿಗೆ ನಿಮ್ಮ ಜೀವಿತಗಳನ್ನು ತೆರೆಯಿರಿ.

## ಪ್ರಕಟನೆಯ ಅಗತ್ಯ

ವಿಶ್ವಾಸಿಗಳ ಜೀವಿತದಲ್ಲಿ ದೈವಿಕ ಪ್ರಕಟನೆಯು ಯಾವ ಸ್ಥಾನವನ್ನು ಹೊಂದಿದೆ? ನಮ್ಮ ಶಾಲೆಗಳಲ್ಲಿ ಕಲಿಸಿದ್ದವುಗಳು ಅಥವಾ ನಮ್ಮ ಐದು ಇಂದ್ರಿಯ ಜ್ಞಾನದ ಮೂಲದ ಗುರುತಿಸುವವುಗಳಿಗಿಂತಲೂ ಮೇಲಾದ ಯಾವುದಾದರೊಂದು ಅಧಿಕವಾಗಿರುವಂತಹದ್ದು ನಮಗೆ ಏಕೆ ಅವಶ್ಯಕ?

## ತಂದೆಯನ್ನು ತಿಳಿದಿರುವುದು

**ನನ್ನ ತಂದೆಯು ಎಲ್ಲವನ್ನು ನನಗೆ ಒಪ್ಪಿಸಿದ್ದಾನೆ. ತಂದೆಯೇ ಹೊರತು ಇನ್ನಾವನೂ ಮಗನನ್ನು ತಿಳಿದವನಲ್ಲ; ಮಗನೇ ಹೊರತು ಇನ್ನಾವನೂ ತಂದೆಯನ್ನು ತಿಳಿದವನಲ್ಲಾ; ಮಗನು ತಂದೆಯನ್ನು ಯಾರಿಗೆ ಪ್ರಕಟಿಸುವದಕ್ಕೆ ಮನಸ್ಸುಳ್ಳವನಾಗಿದ್ದಾನೋ ಅವನೂ ಆತನನ್ನು ತಿಳಿದವನಾಗಿದ್ದಾನೆ.** (ಮತ್ತಾಯ 11:27)

**ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ.** (ಎಫೆಸದವರಿಗೆ 1:17)

ಕರ್ತನಾದ ಯೇಸುವು ಆತನನ್ನು ಪ್ರಕಟಪಡಿಸುವವರಿಗೆ ಹೊರತು ಬೇರೆ ಯಾರಿಗೂ ತಂದೆಯನ್ನು ತಿಳಿಯಲಾಗುವುದಿಲ್ಲ. ತಂದೆಯೊಂದಿಗಿನ ಆತ್ಮೀಯತೆಯು, ಪರಿಶ್ರಮಶೀಲ ವೈಜ್ಞಾನಿಕ ತನಿಖೆಯ ಫಲಿತಾಂಶವಾಗಿರುವುದಿಲ್ಲ. ಇಲ್ಲವೇ ಇದು ಬಹಳ ಆಳವಾದ ಬೌದ್ಧಿಕ ಪರೀಕ್ಷೆಯ ಫಲಿತಾಂಶವಲ್ಲ. ಅಷ್ಟೇ ಅಲ್ಲದೇ ಇದು ಧಾರ್ಮಿಕ ಒಳಗೊಳ್ಳುವಿಕೆ ಫಲಿತಾಂಶವೂ ಅಲ್ಲ. ನಾವು ತಂದೆಯನ್ನು ತಿಳಿದಿದ್ದೇವೆ. ಯಾಕೆಂದರೆ ಕರ್ತನಾದ ಯೇಸುವು ಆತನನ್ನು ನಮಗೆ ಆತನ ಆತ್ಮನಿಂದ ಪ್ರಕಟಪಡಿಸುತ್ತಾನೆ. ನಾವು ದೇವರ ಬಗ್ಗೆ ಜ್ಞಾನ ಹೊಂದಿರಬಹುದು ಮತ್ತು ಈ ಜ್ಞಾನವು ಸರಿಯಾದುದಾಗಿರಬಹುದು ಆದರೆ ಇದು ಆತನನ್ನು ನಿಕಟವಾಗಿ

ತಿಳಿಯುವುದರಂತೆ ಇರುವುದಿಲ್ಲ. ದೇವರ ಬಗ್ಗೆ ಜ್ಞಾನವು ವಿದ್ಯಾಭ್ಯಾಸದ ಮೂಲಕವಾಗಿ ಗಳಿಸಬಹುದು ಆದರೆ ಆತನನ್ನು ತಿಳಿಯುವುದು ಪ್ರಕಟನೆಯ ಮೂಲಕ ಬರುತ್ತದೆ.

## ಮಗನನ್ನು ತಿಳಿದಿರುವುದು

**ಆತನು ಅವರನ್ನು ಆದರೆ ನೀವು ನನ್ನನ್ನು ಯಾರನ್ನುತ್ತೀರಿ ಎಂದು ಕೇಳಲಾಗಿ ಸೀಮೋನ್ ಪೇತ್ರನು - ನೀನು ಬರಬೇಕಾಗಿರುವ ಕ್ರಿಸ್ತನು ಜೀವಸ್ವರೂಪನಾದ ದೇವರ ಕುಮಾರನು ಎಂದು ಉತ್ತರಕೊಟ್ಟನು ಅದಕ್ಕೆ ಯೇಸು ಯೋನನ ಮಗನಾದ ಸೀಮೋನನೇ, ನೀನು ಧನ್ಯನು ಈ ಗುಟ್ಟು ನಿನಗೆ ತಿಳಿಸಿದವನು ನರಮನುಷ್ಯನಲ್ಲ ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು** (ಮತ್ತಾಯ 16:15-17).

**ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು. ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು; ನಾನೂ ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವೆನು ಎಂದು ಹೇಳಿದನು.** (ಯೋಹಾನ 14:21)

ಪ್ರಕಟನೆಯ ಮೂಲಕವಾಗಿ ಕರ್ತನಾದ ಯೇಸುವನ್ನು ನಾವು ತಿಳಿದಿದ್ದೇವೆ. ಆತನ ಭೂಲೋಕದ ಸೇವೆಯ ಅವಧಿಯಲ್ಲಿ ಇದ್ದಂತಹ ಧಾರ್ಮಿಕ ಜನರು ನಮ್ಮ ಈ ದಿನಗಳ ಅನೇಕ ವಿದ್ಯಾವಂತರ ಮನಸ್ಸುಳ್ಳವರು ಕರ್ತನಾದ ಯೇಸುಕ್ರಿಸ್ತನ ದೈವತ್ವವನ್ನು ಅರ್ಥಮಾಡಿಕೊಳ್ಳುವುದಿಲ್ಲ. ಅವರು ಕ್ರಿಸ್ತನನ್ನು ಪರಿಹಾಸ್ಯಮಾಡುತ್ತಾರೆ ಮತ್ತು ಅವರ ಲೌಕಿಕ ಕಲಿಕೆಗಳಲ್ಲಿ ಗರ್ವ ಪಡುತ್ತಾರೆ. ಅವರು ಎಷ್ಟು ಮೂರ್ಖರೆಂಬುದನ್ನು ಅವರು ಸ್ಪಷ್ಟವಾಗಿ ಗ್ರಹಿಸುವುದಿಲ್ಲ ಅಥವಾ ಅವರ ದಡ್ಡತನದ ಪದವಿಯನ್ನು ಗ್ರಹಿಸುವುದಿಲ್ಲ ಯಾಕೆಂದರೆ ಅವರ ಹೃದಯಗಳು ಕಠಿಣಗೊಂಡಿವೆ. ಅವರ ಜೀವಿತಗಳಿಗೆ ದೇವರ ಆತ್ಮನು ತರಲು ಇಷ್ಟಪಡುವ ಪ್ರಕಟನೆಯನ್ನು ಪಡೆದುಕೊಳ್ಳಲು ಅಸಮರ್ಥರಾಗಿದ್ದಾರೆ. ಆದುದರಿಂದ ಅವರ ಅಜ್ಞಾನವು ದೇವರಿಂದಾಗುವ ಜೀವದಿಂದ ಅವರನ್ನು ತೆಗೆದು ಹಾಕುತ್ತದೆ. (ಎಫೆಸದವರಿಗೆ 4:18) ನಾವು ಚಿಕ್ಕ ಮಕ್ಕಳಂತೆ ನಮ್ಮ ಹೃದಯಗಳಲ್ಲಿ ನಮ್ಮನ್ನು ತಗ್ಗಿಸಿಕೊಂಡಾಗ ಮಾತ್ರ ದೇವರ ಆತ್ಮನಿಂದ ಪ್ರಕಟನೆಯನ್ನು ಪಡೆದುಕೊಳ್ಳಲು ನಾವು ಶಕ್ತರಾಗುತ್ತೇವೆ.

ಯೇಸುಕ್ರಿಸ್ತನ ನಮ್ಮ ವೈಯಕ್ತಿಕ ಪ್ರಕಟನೆಯಲ್ಲಿ ನಾವು ಪ್ರಗತಿಪರವಾಗಿ ಬೆಳೆಯಬೇಕಾದರೆ ನಾವು ಆತನ ಕಡೆಗೆ ವಿಧೇಯತೆ ಮತ್ತು ಪ್ರೀತಿಯಲ್ಲಿ ನಡೆಯಬೇಕು. ಆತ್ಮನ ಆಜ್ಞೆಗಳಿಗೆ ವಿಧೇಯರಾಗಿ ನಡೆಯುವವರಿಗೆ ತನ್ನನ್ನು ತಾನೇ ಪ್ರಕಟಪಡಿಸುವೆನೆಂಬುದಾಗಿ ಯೇಸು ಹೇಳಿದ್ದಾನೆ. ಆತನು ತನ್ನನ್ನು ತಾನು ನಮಗೆ

ಪ್ರಕಟಪಡಿಸದೇ ನಾವು ಇತರರಿಗೆ ಆತನನ್ನು ಪ್ರಕಟಿಸಲಾಗುವುದಿಲ್ಲ. ನಾವು ಆತನನ್ನು ವೈಯಕ್ತಿಕವಾಗಿ ತಿಳಿದಿರುವುದರ ಅಂಶದಿಂದ ಮಾತ್ರವೇ ಆತನನ್ನು ಇತರರಿಗೆ ತಿಳಿಯುವಂತೆ ಮಾಡಲು ಸಾಧ್ಯ.

## ದೇವರ ಕೆಲಸಗಳನ್ನು ತಿಳಿಯುವುದು

**ಆಗ ಆತನು ತನ್ನ ಮಹತ್ಕಾರ್ಯಗಳು ಬಹಳವಾಗಿ ನಡೆದ ಊರುಗಳು ದೇವರ ಕಡೆಗೆ ತಿರುಗಲಿಲ್ಲವೆಂದು ಅವುಗಳನ್ನು ಗದರಿಸತೊಡಗಿದನು. ಆ ಸಮಯದಲ್ಲಿ ಯೇಸು ಹೇಳಿದ್ದೇನೆಂದರೆ – ತಂದೆಯೇ ಪರಲೋಕ ಭೂಲೋಕಗಳ ಒಡೆಯನೇ, ನೀನು ಜ್ಞಾನಿಗಳಿಗೂ ಬುದ್ಧಿವಂತರಿಗೂ ಈ ಮಾತುಗಳನ್ನು ಮರೆಮಾಡಿ ಬಾಲಕರಿಗೆ ಪ್ರಕಟಮಾಡಿದ್ದೀ ಎಂದು ನಿನ್ನನ್ನು ಕೊಂಡಾಡುತ್ತೇನೆ. ಹೌದು, ತಂದೆಯೇ, ಹೀಗೆ ಮಾಡುವದೇ ಒಳ್ಳೆಯದೆಂದು ನಿನ್ನ ದೃಷ್ಟಿಗೆ ತೋರಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ.** (ಮತ್ತಾಯ 11:20,25,26)

**ಪೇತ್ರ ಯೋಹಾನರು ಧೈರ್ಯದಿಂದ ಮಾತಾಡುವದನ್ನು ಆ ಸಭಿಕರು ನೋಡಿ ಅವರು ಶಾಸ್ತ್ರಾಭ್ಯಾಸ ಮಾಡದ ಸಾಧಾರಣರೆಂದು ತಿಳಿದು ಆಶ್ಚರ್ಯಪಟ್ಟರು. ಇವರು ಯೇಸುವಿನ ಸಂಗಡ ಇದ್ದವರೆಂದು ಗುರುತುಹಿಡಿದರು ಮತ್ತು ಕ್ಷೇಮಹೊಂದಿದ ಆ ಮನುಷ್ಯನು ಅವರ ಕೂಡ ನಿಂತಿರುವದನ್ನು ನೋಡಿ ಪ್ರತಿಯಾಗಿ ಏನೂ ಮಾತಾಡಲಾರದೆ ಇದ್ದರು.** (ಅಪೊಸ್ತಲರ ಕೃತ್ಯಗಳು 4:13-14)

ಆತನ ಭೂಲೋಕದ ಸೇವೆಯ ಅವಧಿಯಲ್ಲಿ ಯೇಸು ಮಾಡಿದ ಅದ್ಭುತ ಕಾರ್ಯಗಳನ್ನು ''ಜ್ಞಾನಿಗಳು ಮತ್ತು ಕಲಿತವರು'' ಅರ್ಥ ಮಾಡಿಕೊಳ್ಳಲು ಅಶಕ್ತರಾದರು. ಅವರು ದೇವರ ಪ್ರಬಲ ಮಹತ್ಕಾರ್ಯಗಳನ್ನು ತರ್ಕಮಾಡಲೂ ಪ್ರಯತ್ನಿಸಿದರು, ''ಬಹುಶಃ ಇದು ವಂಚನೆ; ಬಹುಶಃ ಇದು ದೆವ್ವದ ಕೆಲಸ. ಇದು ಯಾವದಾದರೊಂದು ಆಗಿರಬಹುದು ಆದರೆ ದೇವರ ಕೆಲಸ'' ಹೇಗಿದ್ದರೂ, ಶಾಲೆಯಲ್ಲಿ ಕಲಿಯದ ಮತ್ತು ಸಾಧಾರಣ ಮನುಷ್ಯರಾದ ಮತ್ತು ''ಚಿಕ್ಕ ಮಕ್ಕಳಂತೆ '' ಯೇಸುವನ್ನು ಹಿಂಬಾಲಿಸಿದ ಪೇತ್ರ ಮತ್ತು ಯೋಹಾನರು ಅದ್ಭುತಕಾರ್ಯಗಳನ್ನು ತಿಳಿದುಕೊಂಡರು ಇವು ದೇವರ ಸತ್ಯ ಕೆಲಸಗಳೆಂದು ಅವರಿಗೆ ಪ್ರಕಟಗೊಂಡವು. ಅವರು ಯೇಸುವಿನ ಹೆಸರಿನಲ್ಲಿ ಪ್ರಕಟನೆಗಳನ್ನು ಪಡೆದುಕೊಂಡರು ಮತ್ತು ಸರಳ ನಂಬಿಕೆಯಿಂದ ಅವರು ಕ್ರಿಸ್ತನ ಕೆಲಸಗಳ ಕಾರ್ಯಗಳನ್ನು ಮಾಡಿದರು. ಕ್ರಿಸ್ತನ ಪುನರುತ್ಥಾನ ಮತ್ತು ಆತನು ಪರಲೋಕಕ್ಕೆ ಏರಿಹೋದ ಮೇಲೆ, ಇಂತಹ ಮನುಷ್ಯರು ಸ್ವಸ್ಥಪಡಿಸುವ ಸೇವೆಯಲ್ಲಿ ಮುಂದುವರೆದರು ಮತ್ತು ದೇವರ ಬಲದ ಕಾರ್ಯದಿಂದ ಅದ್ಭುತಕಾರ್ಯಗಳನ್ನು ಸಾಬೀತುಪಡಿಸಿದರು.

ಈ ದಿನಗಳಲ್ಲಿ ಅನೇಕ ''ಜ್ಞಾನಿಗಳು ಮತ್ತು ಕಲಿತವರು'' ಕ್ರಿಸ್ತೀಯ ದೈವಶಾಸ್ತ್ರಜ್ಞರು, ಪ್ರಸಂಗಿಗಳು ಮತ್ತು ಬೋಧಕರು ದೇವರ ಕಾರ್ಯಗಳನ್ನು ತಿಳಿಯಲು ಅಸಮರ್ಥರಾಗಿರುವುದು ದುಃಖಕರವೆಂದು ಹೇಳಬಹುದು. ಅನೇಕರು ಅಧಿಕವಾಗಿ ಸಮಯ ಕಳೆದಿದ್ದಾರೆ ಮತ್ತು ನಮ್ಮ ದಿನದಲ್ಲಿ ಪ್ರದರ್ಶಿಸಿದ ಸೂಚಕಕಾರ್ಯಗಳು ಮತ್ತು ಅದ್ಭುತಕಾರ್ಯಗಳನ್ನು ವಿವಾದಕ್ಕೆ ಸಿಲುಕಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದಾಗ್ಯೂ ಅನೇಕ ''ಶಾಲೆಗೆ ಹೋಗದ ಮತ್ತು ಸಾಧಾರಣ'' ಸ್ತ್ರೀ ಪುರುಷರು ಅವರ ಸೇವೆಯಲ್ಲಿ ದೇವರ ಪ್ರಬಲ ಮಹತ್ಕಾರ್ಯಗಳನ್ನು ಅನುಭವಿಸುವುದರಲ್ಲಿ ಮುಂದುವರೆಯುತ್ತಿದ್ದಾರೆ. ದೇವರ ಪ್ರಕೃತ್ಯತೀತ ಸಂದರ್ಶನವನ್ನು ಸ್ವಾಗತಿಸಲು ಪ್ರಕಟನೆಯು ಬೇಕು.

## ದೇವರ ರಾಜ್ಯದ ರಹಸ್ಯರ್ಥಗಳನ್ನು ತಿಳಿಯುವುದು

**ತರುವಾಯ ಆತನ ಶಿಷ್ಯರು ಬಂದು – ಯಾಕೆ ಸಾಮ್ಯರೂಪವಾಗಿ ಅವರ ಸಂಗಡ ಮಾತಾಡುತ್ತೀ ಎಂದು ಕೇಳಿದರು ಅದಕ್ಕಾತನು ಅವರಿಗೆ ಪರಲೋಕ ರಾಜ್ಯದ ಗುಟ್ಟುಗಳನ್ನು ತಿಳಿಯುವ ವರವು ನಿಮಗೇ ಕೊಟ್ಟಿದೆ; ಅವರಿಗೆ ಕೊಟ್ಟಿಲ್ಲ; ಯಾಕೆಂದರೆ ಇದ್ದವನಿಗೆ ಕೊಡಲ್ಪಡುವದು, ಅವನಿಗೆ ಮತ್ತೂ ಹೆಚ್ಚಾಗುವದು; ಇಲ್ಲದವನ ಕಡೆಯಿಂದ ಇದ್ದದ್ದೂ ತೆಗೆಯಲ್ಪಡುವದು ನಾನು ಅವರ ಸಂಗಡ ಸಾಮ್ಯರೂಪವಾಗಿ ಮಾತಾಡುವದಕ್ಕೆ ಕಾರಣವೇನಂದರೆ ಅವರಿಗೆ ಕಣ್ಣಿದ್ದರೂ ನೋಡುವದಿಲ್ಲ, ಕಿವಿಯಿದ್ದರೂ ಕೇಳುವದಿಲ್ಲ ಮತ್ತು ತಿಳಿದುಕೊಳ್ಳುವುದಿಲ್ಲ ಯೆಶಾಯನು ಹೇಳಿದ ಪ್ರವಾದನೆಯು ಅವರಲ್ಲಿ ನೆರವೇರುತ್ತದೆ. ಅದೇನೆಂದರೆ – ನೀವು ಕಿವಿಯಿದ್ದು ಕೇಳಿದರೂ ತಿಳುಕೊಳ್ಳುವದೇ ಇಲ್ಲ; ಕಣ್ಣಿದ್ದೂ ನೋಡಿದರೂ ಕಾಣುವುದೇ ಇಲ್ಲ ಈ ಜನರ ಹೃದಯವು ಕೊಬ್ಬಿತು. ಇವರ ಕಿವಿ ಮಂದವಾಯಿತು; ಇವರು ಕಣ್ಣು ಮುಚ್ಚಿಕೊಂಡಿದ್ದಾರೆ ತಾವು ಕಣ್ಣಿನಿಂದ ಕಂಡು ಕಿವಿಯಿಂದ ಕೇಳಿ ಹೃದಯದಿಂದ ತಿಳಿದು ನನ್ನ ಕಡೆಗೆ ತಿರುಗಿಕೊಂಡು ನನ್ನಿಂದ ಸ್ವಸ್ಥತೆಯನ್ನು ಹೇಗೋ ಹೊಂದಬಾರದೆಂದು ಮಾಡಿಕೊಂಡಿದ್ದಾರೆ ಎಂಬುದು. ಆದರೆ ನಿಮ್ಮ ಕಣ್ಣು ಕಾಣುತ್ತವೆ ನಿಮ್ಮ ಕಿವಿ ಕೇಳುತ್ತವೆ. ಆದ್ದರಿಂದ ನೀವು ಧನ್ಯರು.** (ಮತ್ತಾಯ 13:10-16)

ಪ್ರಕಟನೆಯು ಪಶ್ಚಾತ್ತಾಪಕ್ಕೆ ದಾರಿತೋರಿಸುತ್ತದೆ. ಪಶ್ಚಾತ್ತಾಪದ ಫಲಿತಾಂಶವು ರಕ್ಷಣೆಯಾಗಿರುತ್ತದೆ. ವ್ಯಕ್ತಿಯ ಸಂಪೂರ್ಣ ಸ್ವಸ್ಥತೆ ನಮ್ಮ ಆತ್ಮಿಕ ಕಣ್ಣುಗಳು ನೋಡಲು ತೆರೆದಿರುವುದು, ನಮ್ಮ ಆತ್ಮಿಕ ಕಿವಿಗಳು ಕೇಳಲು ತೆರೆದಿರುವುದು, ಮತ್ತು ಆತ್ಮಿಕ ಸತ್ಯಗಳನ್ನು ತಿಳಿದುಕೊಳ್ಳಲು ನಮ್ಮ ಆತ್ಮಿಕ ಹೃದಯಗಳು ತೆರೆದಿರುವುದು ಪ್ರಕಟನೆಯಾಗಿದೆ ಸತ್ಯವನ್ನು ಆಲಿಂಗಿಸುವ ನಮ್ಮ ಅಗತ್ಯತೆ ಗುರ್ತಿಸುವ ಕಡೆಗೆ ನಡೆಸುತ್ತದೆ. ನಾವು ನಮ್ಮ ಮೂರ್ಖತನ ತೊರೆದು ಬಿಟ್ಟು ತಿರುಗುವುದು ಮತ್ತು

ಸತ್ಯವನ್ನು ಆಲಂಗಿಸುವುದೇ ಪಶ್ಚಾತ್ತಾಪವಾಗಿದೆ. ಆಮೇಲೆ ದೇವರು ಸ್ವಸ್ಥತೆಯನ್ನು ತರುವುದು ಇದಾಗಿದೆ (ಆದಾಗ್ಯೂ ದೇವರು ಮೊದಲು ಪ್ರಬಲವಾದ ಮಹತ್ಕಾರ್ಯಗಳನ್ನು ಮಾಡಿ ಜನರ ಕಣ್ಣುಗಳನ್ನು ತೆರೆದು ಆನಂತರ ಅವರನ್ನು ಪಶ್ಚಾತ್ತಾಪದ ಕಡೆಗೆ ನಡೆಸಿದ ಸಮಯಗಳು ಉಂಟು).

ಆತ್ಮನ ಪ್ರಕಟನೆಯ ಮೂಲಕವಾಗಿ ದೇವರ ರಾಜ್ಯದ ರಹಸ್ಯಗಳನ್ನು ನಮ್ಮ ತಿಳುವಳಿಕೆಗೆ ದೇವರು ತರುತ್ತಾನೆ. ಪವಿತ್ರಾತ್ಮನು ನಮ್ಮ ಹೃದಯಗಳು ಮತ್ತು ಮನಸ್ಸುಗಳ ಮೇಲೆ ಆತನ ಬೆಳಕನ್ನು ಹರಿಸುತ್ತಾನೆ. ನಾವು ದೇವರ ಮಾರ್ಗಗಳನ್ನು ಅರ್ಥಮಾಡಿಕೊಳ್ಳುತ್ತೇವೆ. ಮತ್ತು ಆತ್ಮಿಕ ತತ್ವಗಳನ್ನು ಗ್ರಹಿಸಲು ಪ್ರಾರಂಭಿಸುತ್ತೇವೆ. ದೇವರ ಜನರಾಗಿ ನಮಗೆ ಇಂದಿನ ದಿನಗಳಲ್ಲಿ ವಿದ್ಯಾಭ್ಯಾಸವು ಮಾತ್ರವಲ್ಲದೇ ಪ್ರಕಟನೆಗಳು ಅಗತ್ಯವಾಗಿವೆ. ಆತ್ಮಿಕ ವಿಷಯಗಳಲ್ಲಿ ನಮಗೆ ವಿದ್ಯಾಭ್ಯಾಸಬೇಕು, ಆದರೆ ಕ್ರಿಸ್ತನ ಅಂಗಕ್ಕೆ ದೊರೆಯುವಂತಹ ಪ್ರಕಟನೆಯ ಜ್ಞಾನವನ್ನು ಗ್ರಹಿಸಿಕೊಳ್ಳುವುದು ನಮಗೆ ಅಗತ್ಯವಾಗಿ ಮತ್ತು ಅಧಿಕವಾಗಿ ಪ್ರಾಮುಖ್ಯತೆಯುಳ್ಳದ್ದಾಗಿದೆ.

**ಪವಿತ್ರಾತ್ಮನು ಪ್ರಕಟನೆಯ ಆತ್ಮನಾಗಿದ್ದಾನೆ**

- ಆತನು ನಮ್ಮೊಂದಿಗೆ ಮಾತನಾಡುತ್ತಾನೆ ಮತ್ತು ತಂದೆಯ ಹೃದಯವನ್ನು ಪ್ರಕಟಪಡಿಸುತ್ತಾನೆ. ಕರ್ತನಾದ ಯೇಸುವು ನಮಗೆ ಏನನ್ನು ತಿಳಿಯಪಡಿಸಬೇಕೆಂಬುದಾಗಿ ಬಯಸುತ್ತಾನೋ ಅದನ್ನು ಪವಿತ್ರಾತ್ಮನು ನಮ್ಮೊಂದಿಗೆ ಮಾತಾಡುತ್ತಾನೆ.
- ''ಇನ್ನೂ ಬರಬೇಕಾಗಿರುವ'' ವಿಷಯಗಳನ್ನು ಆತನು ನಮಗೆ ಹೇಳುತ್ತಾನೆ.
- ವಿಶ್ವಾಸಿಗಳಾಗಿ, ನಮ್ಮ ಜೀವಿತಗಳಿಗೆ ದೇವರ ಆತ್ಮನು ತರುವ ಪ್ರಕಟನೆಗಾಗಿ ನಾವು ಇಚ್ಛೆಹೊಂದಿರುವುದು ಅಗತ್ಯ
- ಕರ್ತನಾದ ಯೇಸುವು ಆತನನ್ನು ಯಾರಿಗೆ ಪ್ರಕಟಪಡಿಸುತ್ತಾನೋ ಅವರನ್ನು ಹೊರತು ಬೇರೆಯವರು ತಂದೆಯನ್ನು ತಿಳಿಯಲಾಗದು ತಂದೆಯೊಂದಿಗಿನ ಆತ್ಮೀಯತೆಯು ಪರಿಶ್ರಮದ ವೈಜ್ಞಾನಿಕ ಪರಿಶೋಧನೆಯ ಫಲಿತಾಂಶವಲ್ಲ.

- ನಾವು ಚಿಕ್ಕ ಮಕ್ಕಳಂತೆ ನಮ್ಮ ಹೃದಯಗಳನ್ನು ತಗ್ಗಿಸಿಕೊಂಡಾಗ ಮಾತ್ರವೇ ದೇವರ ಆತ್ಮನಿಂದ ಪ್ರಕಟನೆಗಳನ್ನು ಪಡೆದುಕೊಳ್ಳಲು ಶಕ್ತರಾಗುತ್ತೇವೆ.
- ಯಾರಾರು ಆತನ ಆಜ್ಞೆಗಳಿಗೆ ವಿಧೇಯರಾಗುತ್ತಾರೋ ಅವರಿಗೆ ತನ್ನನ್ನು ತಾನೇ ಪ್ರಕಟಪಡಿಸುತ್ತೇನೆ. ಎಂಬುದಾಗಿ ಯೇಸು ಹೇಳಿದ್ದಾನೆ.
- ಅನೇಕ ''ಶಾಲೆಯಲ್ಲಿ ಕಲಿಯದ ಮತ್ತು ಸಾಧಾರಣ ಸ್ತ್ರೀ ಪುರುಷರು, ಅವರ ಸೇವೆಯಲ್ಲಿ ದೇವರ ಪ್ರಬಲ ಮಹತ್ಕಾರ್ಯಗಳನ್ನು ಅನುಭವಿಸುವುದರಲ್ಲಿ ಮುಂದುವರೆಯುತ್ತಿದ್ದಾರೆ. ದೇವರ ಪ್ರಕೃತ್ಯತೀತ ಸಂದರ್ಶನಗಳನ್ನು ಆಹ್ವಾನಿಸಲು ಪ್ರಕಟನೆಯು ಬೇಕು.
- ಪ್ರಕಟನೆಯು, ನಮ್ಮ ಆತ್ಮಿಕ ಕಣ್ಣುಗಳು ತೆರೆದಿರುವುದು, ನಮ್ಮ ಆತ್ಮಿಕ ಕಿವಿಗಳು ತೆರೆದಿರುವುದು ಮತ್ತು ಆತ್ಮಿಕ ಸತ್ಯಗಳನ್ನು ತಿಳಿದುಕೊಳ್ಳಲು ನಮ್ಮ ಆತ್ಮಿಕ ಹೃದಯಗಳು ತೆರೆದಿರುವುದಾಗಿದೆ.

## ಸತ್ಯವೇದದ ಪ್ರಕಟನೆ

**ರಹಸ್ಯವಾದವುಗಳು ನಮ್ಮ ದೇವರಾದ ಯೆಹೋವನವು; ಆದರೆ ಆತನಿಂದ ಪ್ರಕಟವಾದವುಗಳು ಸದಾ ನಮ್ಮ ಮತ್ತು ನಮ್ಮ ಸಂತತಿಯವರ ಪಾಲಾಗಿರುವದರಿಂದ ನಾವು ಈ ಧರ್ಮಶಾಸ್ತ್ರ ನಿಯಮಗಳನ್ನು ಅನುಸರಿಸಿ ನಡೆಯಬೇಕಾದ ಹಂಗಿನಲ್ಲಿದ್ದೇವೆ.** (ಧರ್ಮೋಪದೇಶಕಾಂಡ 29:29).

**ದೇವರು ನಿಮಗೆ ತೋರಿಸಿರುವ ಕೃಪೆಯನ್ನು ಕುರಿತು ಮುಂತಿಳಿಸಿದ ಪ್ರವಾದಿಗಳು ಈ ರಕ್ಷಣೆಯ ವಿಷಯದಲ್ಲಿ ಸೂಕ್ಷ್ಮವಾಗಿ ವಿಚಾರಿಸಿ ಪರಿಶೋಧನೆ ಮಾಡಿದ್ದರು ತಮ್ಮಲ್ಲಿದ್ದ ಕ್ರಿಸ್ತನ ಆತ್ಮನು ಕ್ರಿಸ್ತನಿಗೆ ಬರಬೇಕಾದ ಬಾಧೆಗಳನ್ನೂ ಅವುಗಳ ತರುವಾಯ ಉಂಟಾಗುವ ಪ್ರಭಾವವನ್ನು ಮುಂದಾಗಿ ತಿಳಿಸಿದಾಗ ಆತನು ಯಾವ ಕಾಲವನ್ನು ಇಲ್ಲವೆ ಎಂಥ ಕಾಲವನ್ನು ಸೂಚಿಸುವನೆಂಬದನ್ನು ಅವರು ಪರಿಶೋಧನೆ ಮಾಡಿದರು. ಈ ಸಂಗತಿಗಳನ್ನು ಮುಂತಿಳಿಸುವದರಲ್ಲಿ ತಮಗೋಸ್ಕರವಲ್ಲ ನಿಮಗೋಸ್ಕರವೇ ಸೇವೆ ಮಾಡುವವರಾಗಿದ್ದರೆಂಬದು ಅವರಿಗೆ ಪ್ರಕಟವಾಯಿತು. ಅವರು ಮುಂದಾಗಿ ಹೇಳಿದ ಸಂಗತಿಗಳೇ ಈಗ ಸಂಭವಿಸಿದವು ಎಂಬ ವರ್ತಮಾನವು ಪರಲೋಕದಿಂದ ಕಳುಹಿಸಲ್ಪಟ್ಟ ಪವಿತ್ರಾತ್ಮನ ಬಲದಿಂದ ನಿಮಗೆ ಸುವಾರ್ತೆಯನ್ನು ಸಾರಿದವರ ಮೂಲಕ ನಿಮಗೆ ಪ್ರಸಿದ್ಧಿ ಮಾಡಲ್ಪಟ್ಟಿದೆ. ದೇವದೂತರಿಗೂ ಈ ಸಂಗತಿಗಳನ್ನು ನೋಡಬೇಕೆಂಬ ಅಪೇಕ್ಷೆ ಉಂಟು** (1 ಪೇತ್ರನು 1:10 - 12).

**ಇದುವರೆಗೆ ಗುಪ್ತವಾಗಿದ್ದ ಒಂದು ಸಂಗತಿ ದೈವ ಪ್ರಕಟನೆಯಿಂದ ನನಗೆ ತಿಳಿಯಲ್ಪಟ್ಟಿತೆಂಬುದನ್ನೂ ನೀವು ಕೇಳಿದ್ದೀರಲ್ಲಾ. ಅದನ್ನು ಕುರಿತು ನಾನು ಹಿಂದೆ ಸಂಕ್ಷೇಪವಾಗಿ ಬರೆದಿದ್ದೇನೆ; ಬರೆದದ್ದನ್ನು ನೀವು ಓದಿ ನೋಡಿದರೆ ಕ್ರಿಸ್ತನ ವಿಷಯವಾದ ಮರ್ಮವನ್ನು ಕುರಿತು ನನಗಿರುವ ಗ್ರಹಿಕೆಯನ್ನು ನೀವು**

**ತಿಳುಕೊಳ್ಳಬಹುದು. ಆ ಮರ್ಮವು ಈ ಕಾಲದಲ್ಲಿ ದೇವರ ಪರಿಶುದ್ಧ ಅಪೊಸ್ತಲರಿಗೂ ಪ್ರವಾದಿಗಳಿಗೂ ಪವಿತ್ರಾತ್ಮನಿಂದ ತಿಳಿಸಲ್ಪಟ್ಟಂತೆ ಬೇರೆ ಕಾಲಗಳಲ್ಲಿದ್ದ ಜನರಿಗೆ ತಿಳಿಸಲ್ಪಡಲಿಲ್ಲ** (ಎಫೆಸದವರಿಗೆ 3:3-5)

**ನನ್ನ ಕಣ್ಣು ತೆರೆ; ಆಗ ನಿನ್ನ ಧರ್ಮಶಾಸ್ತ್ರದ ಅದ್ಭುತಗಳನ್ನು ಕಂಡುಕೊಳ್ಳುವೆನು** (ಕೀರ್ತನೆಗಳು 119:19).

ಸತ್ಯವೇದವು - ದೇವರ ಬರೆಯಲ್ಪಟ್ಟ ವಾಕ್ಯಗಳು ಅಗೋಚರ ಅಸ್ತಿತ್ವಗಳ ಪ್ರಕಟನೆಯಾಗಿದೆ. ಅವುಗಳು ಪ್ರಕಟನೆಯಿಂದ ಕೊಡಲ್ಪಟ್ಟವುಗಳಾಗಿವೆ ಅವು ಈ ದಿನಗಳಲ್ಲಿ ಪ್ರಕಟನೆಗಳ ಮೂಲಕ ತಿಳಿಯುತ್ತವೆ. ಪ್ರವಾದಿಗಳು ಪ್ರಕಟನೆಯಿಂದ ಪಡೆದುಕೊಂಡಂತಹ ದೇವರ ವಾಕ್ಯಗಳನ್ನು ಮುಂದಾಗಿ ಹೊರ ತಂದಿದ್ದಾರೆ ದೇವರ ಆತ್ಮನು ಅವರಲ್ಲಿ ಕಾರ್ಯಮಾಡಿ, ಅವರಿಗೆ ಪ್ರಕಟನೆ ನೀಡಿದ್ದಾನೆ ಮತ್ತು ದೇವರ ರಹಸ್ಯ ವಿಷಯಗಳಲ್ಲಿ ಸೂಕ್ಷ್ಮ ಪರಿಜ್ಞಾನವನ್ನು ಕೊಟ್ಟಿದ್ದಾನೆ. ಇವುಗಳು ಆಮೇಲೆ ನಮ್ಮ ಪ್ರಯೋಜನಕ್ಕಾಗಿ ಬರೆದಿಡಲ್ಪಟ್ಟವು ಈ ದಿನಗಳಲ್ಲಿ ನಾವು ಬರೆಯಲ್ಪಟ್ಟ ಸತ್ಯವೇದದ ವಚನಭಾಗಗಳನ್ನು ನೋಡುವಾಗ ನಮ್ಮ ಕಣ್ಣುಗಳು ತೆರೆದಿರುವುದು ಅವಶ್ಯಕ. ಸತ್ಯವೇದದ ವಚನಭಾಗಗಳು ಬರೆಯಲ್ಪಡಲು ಪ್ರೇರಿಸಿದ ಅದೇ ಆತ್ಮನು ಸತ್ಯವೇದದ ವಚನಭಾಗಗಳಲ್ಲಿ ದಾಖಲಿಸಲ್ಪಟ್ಟ ಮಹತ್ಕಾರ್ಯಗಳನ್ನು ನಮ್ಮ ಕಣ್ಣುಗಳು ನೋಡಲು ಜ್ಞಾನೋದಯವುಂಟು ಮಾಡುತ್ತಾನೆ.

## ಆತ್ಮನ ಮೂಲಕ ನಮಗೆ ಪ್ರಕಟಗೊಂಡಿವೆ

**ಆದರೆ ಬರೆದಿರುವ ಪ್ರಕಾರ ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ ಕಿವಿ ಕೇಳಲಿಲ್ಲ ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು ದೇವರ ಆಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ. ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವುದಿಲ್ಲ ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೇ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವುದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು.** (1 ಕೊರಿಂಥದವರಿಗೆ 2:9-12)

ಆತನನ್ನು ಪ್ರೀತಿಸುವವರಿಗಾಗಿ ದೇವರು ಸಿದ್ಧಗೊಳಿಸಿರುವ ಯಾವ ಮನುಷ್ಯನೂ ನೋಡದ, ಕೇಳದ ಮತ್ತು ಆಲೋಚಿಸದ ವಿಷಯಗಳಿವೆ. ಕ್ರಿಸ್ತನ ಅಂಗಗಳಾದ ನಮಗೂ ಅಂತಹ ವಿಷಯಗಳು ಸಿದ್ಧಗೊಂಡಿವೆ. ಇವುಗಳನ್ನು ಆತನ ಆತ್ಮನಿಂದ

ದೇವರು ನಮಗೆ ಪ್ರಕಟಗೊಳಿಸಿದ್ದಾನೆ ಮತ್ತು ಅವುಗಳು ಬರೆಯಲ್ಪಟ್ಟ ಸತ್ಯವೇದದ ವಚನಭಾಗಗಳಲ್ಲಿ ನಮಗಾಗಿ ದಾಖಲಿಸಲ್ಪಟ್ಟಿವೆ. ಇದು ಕ್ರಿಸ್ತನ ಅಂಗದಲ್ಲಿ ಪ್ರಕಟನೆಯ ಆತ್ಮನ ಮುಂದುವರೆದ ಕೆಲಸದ ಮೂಲಕವಾಗಿ ಸತ್ಯವೇದದ ವಚನಗಳಲ್ಲಿ ಪ್ರಕಟಗೊಂಡಿರುವುದು ಪುಸ್ತಕದಲ್ಲಿ ತಿಳಿದುಕೊಂಡ ಪ್ರಕಟನೆಗಳಾಗಿ ಕಂಡುಬರುತ್ತವೆ. ಕ್ರಿಸ್ತನ ಅಂಗವು ಪ್ರಯಾಣದಲ್ಲಿದೆ, ದೇವರು ನಮಗಾಗಿ ಉಚಿತವಾಗಿ ಕೊಟ್ಟ ಅಧಿಕ ವಿಷಯಗಳು ಪ್ರಗತಿಪರವಾಗಿ ಅಧಿಕ ತಿಳುವಳಿಕೆಗೆ ಬರುತ್ತದೆ. ಇದು ಪ್ರಪಂಚದಾದ್ಯಂತವಿರುವ ಸ್ಥಳೀಯ ಸಭೆಗಳು/ಅನ್ಯೋನ್ಯತೆಗಳೇ ಜೀವಿತಗಳಲ್ಲಿ ವ್ಯಕ್ತಗತವಾಗಿ ನಮ್ಮ ವೈಯಕ್ತಿಕ (ಸ್ವಂತ) ಜೀವಿತಗಳಲ್ಲಿ ಸತ್ಯವಾಗಿರುತ್ತದೆ. ದೇವರು ನಮಗಾಗಿ ಯೋಜಿಸಿದಂತಹ ಮತ್ತು ಆತನ ಆತ್ಮನ ಮೂಲಕವಾಗಿ ನಮಗೆ ಪ್ರಕಟಗೊಳಿಸುವಂತಹ ವಿಷಯಗಳಿವೆ. ಇಂತಹ ವಿಷಯಗಳ ಪ್ರಕಟನೆಯನ್ನು ನಾವು ಪಡೆದುಕೊಳ್ಳುವುದು ಅಗತ್ಯ ಆದ್ದರಿಂದ ಆತನು ನಮಗಾಗಿ ಸಿದ್ಧಗೊಳಿಸಿರುವುಗಳನ್ನು ಅಧೀನಪಡಿಸಿಕೊಳ್ಳುವ ಕೆಲಸದ ಕಡೆಗೆ ನಾವು ವಿಶೇಷ ಪ್ರಯತ್ನ ಮಾಡಬೇಕು

## ಪ್ರಕಟನೆಯ ಆತ್ಮನು ಮತ್ತು ಪ್ರಕಟನೆಯ ವರಗಳು

**ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿವೆ. ಒಬ್ಬನಿಗೆ ದೇವರಾತ್ಮನ ಮೂಲಕ ಜ್ಞಾನವಾಕ್ಯವು ಒಬ್ಬನಿಗೆ ಆ ಆತ್ಮನಿಗೆ ಅನುಗುಣವಾಗಿ ವಿದ್ಯಾವಾಕ್ಯವು, ಒಬ್ಬನಿಗೆ ಆ ಆತ್ಮನಿಂದಲೇ ನಂಬಿಕೆಯು, ಆ ಒಬ್ಬ ಆತ್ಮನಿಂದಲೇ ನಾನಾ ರೋಗಗಳನ್ನು ವಾಸಿ ಮಾಡುವ ವರವು, ಒಬ್ಬನಿಗೆ ಮಹತ್ತುಗಳನ್ನು ಮಾಡುವ ವರವು, ಒಬ್ಬನಿಗೆ ಪ್ರವಾದನೆಯ ವರವು, ಒಬ್ಬನಿಗೆ ಸತ್ಯಸತ್ಯಾತ್ಮಗಳನ್ನು ವಿವೇಚಿಸುವ ವರವು, ಒಬ್ಬನಿಗೆ ವಿವಿಧ ವಾಣಿಗಳನ್ನಾಡುವ ವರವು, ಒಬ್ಬನಿಗೆ ವಾಣಿಗಳ ಅರ್ಥವನ್ನು ಹೇಳುವ ವರವು ಕೊಡಲ್ಪಡುತ್ತವೆ.** (1 ಕೊರಿಂಥದವರಿಗೆ 12:7-10)

ದೇವರ ಪ್ರಸನ್ನತೆ ಮತ್ತು ದೇವರ ಆತ್ಮನ ಕ್ರಿಯೆಗಳು ವಿಶ್ವಾಸಿಗಳ ಜೀವಿತಗಳಲ್ಲಿ ಭಿನ್ನವಾದ ರೀತಿಯಲ್ಲಿ ಸ್ಪಷ್ಟವಾಗಿ ತೋರಿಸಲ್ಪಡುತ್ತವೆ. ಆತ್ಮನ ಒಂಭತ್ತು ವರಗಳು ಆತ್ಮನ ಪ್ರಸನ್ನತೆ ಮತ್ತು ಕ್ರಿಯೆಯ ತೋರ್ಪಡಿಸುವಿಕೆ ಅಥವಾ ಅಭಿವ್ಯಕ್ತತೆ ಎಂದು ಸಾಮಾನ್ಯ ರೀತಿಯಲ್ಲಿ ತಿಳಿದಿರುವುದಾಗಿದೆ. ಆತನು ಯಾರ ಮೂಲಕವಾಗಿ ಆ ಸಮಯದಲ್ಲಿ ಕ್ರಿಯೆ ಮಾಡಬೇಕೆಂಬುದಾಗಿರುತ್ತಾನೋ ಅಂತಹ ಮಾನವ ಪಾತ್ರೆಗಳಿಗೆ ದೇವರ ಆತ್ಮನು ಪಾಲುಕೊಡುವುದರಿಂದ ಇಂತಹ ಅನೇಕ ವರಗಳ ಪ್ರಕಟನೆಯು ತೊಡಗುತ್ತದೆ. ಜ್ಞಾನ ವಾಕ್ಯವನ್ನು, ವಿವೇಕದವಾಕ್ಯವನ್ನು ಪ್ರವಾಧನೆಯ ವಾಕ್ಯವನ್ನು ಅಥವಾ ಆತ್ಮಿಕ ಆದಿಪತ್ಯದಲ್ಲಿ ಸೂಕ್ಷ್ಮ ಪರಿಜ್ಞಾನವನ್ನು ಉತ್ಪಾದಿಸುವಂತಹ ಮಾನವ ಪಾತ್ರೆಗೆ ಯಾವುದಾದರೊಂದು ಪ್ರಕಟನೆಯಿರುತ್ತದೆ.

## ಪ್ರಕಟನೆಯ ಆತ್ಮನು ಮತ್ತು ಅನ್ಯ ಭಾಷೆಗಳಲ್ಲಿ ಪ್ರಾರ್ಥನೆ

**ವಾಣಿಯನ್ನಾಡುವವನು ದೇವರ ಸಂಗಡ ಮಾತಾಡುತ್ತಾನೆ ಹೊರತು ಮನುಷ್ಯರ ಸಂಗಡ ಆಡುವುದಿಲ್ಲ, ಅವನು ಆತ್ಮಪ್ರೇರಿತನಾಗಿ ರಹಸ್ಯಾರ್ಥಗಳನ್ನು ನುಡಿಯುತ್ತಿದ್ದರೂ ಯಾರೂ ತಿಳುಕೊಳ್ಳುವದಿಲ್ಲ** ( 1 ಕೊರಿಂಥದವರಿಗೆ 14:2).

ನಾವು ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ, ನಾವು ರಹಸ್ಯಾರ್ಥಗಳನ್ನು ನುಡಿಯುತ್ತೇವೆ. ನಮ್ಮ ಮನಸ್ಸಿಗೆ ಗೊತ್ತಿಲ್ಲದಿರುವ ವಿಷಯಗಳ ಕುರಿತು ನಾವು ಮಾತಾಡುತ್ತೇವೆ. ನಾವು ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ ಪವಿತ್ರಾತ್ಮನು ಪ್ರಕಟನೆಯ ಆತ್ಮನಂತೆ, ಮಧ್ಯಸ್ಥಿಕೆಯ ಆತ್ಮ ಮತ್ತು ಇನ್ನೂ ಅಧಿಕವಾದ ರೀತಿಯಲ್ಲಿ ನಮ್ಮ ಮೂಲಕ ಕ್ರಿಯೆ ಮಾಡಲು ನಾವು ಅವಕಾಶ ನೀಡಬೇಕು. ನಮಗೆ ಪರಿಚಯವಿರದ ಜನರು, ಸ್ಥಳಗಳು ಮತ್ತು ನಮಗೆ ಅದರ ಕುರಿತು ಜ್ಞಾನವಿಲ್ಲದ ಘಟನೆಗಳು ಅವರ ಬಗ್ಗೆ ಸ್ವಲ್ಪವೂ ಗೊತ್ತಿಲ್ಲದವರಿಗಾಗಿ ನಾವು ಪ್ರಾರ್ಥಿಸಬಹುದು, ಯಾಕೆಂದರೆ ಪವಿತ್ರಾತ್ಮನು ನಮ್ಮ ಆತ್ಮಗಳಲ್ಲಿ ರಹಸ್ಯಾರ್ಥಗಳನ್ನು ಮಾತಾಡುವಂತೆ ನಮ್ಮನ್ನು ಶಕ್ತಗೊಳಿಸುತ್ತಾನೆ.

## ಪ್ರಕಟನೆ ಮತ್ತು ಆತ್ಮನು ಮತ್ತು ವಾಕ್ಯದ ಸೇವೆ

**ಹೀಗಿರುವರಿಂದ ಸಹೋದರರೇ, ನಾನು ನಿಮ್ಮ ಬಳಿಗೆ ಬಂದು ದೇವರು ತಿಳಿಸಿದ್ದನ್ನು ಪ್ರಕಟಿಸದೆ ಜ್ಞಾನವಾಕ್ಯವನ್ನಾಡದೆ ಪ್ರವಾದನೆಯನ್ನು ಹೇಳದೆ ಉಪದೇಶ ಮಾಡದೆ ವಾಣಿಗಳನ್ನು ಮಾತ್ರ ಆಡುವವನಾಗಿದ್ದರೆ ನನ್ನಿಂದ ನಿಮಗೇನು ಪ್ರಯೋಜನವಾದೀತು?** (1 ಕೊರಿಂಥದವರಿಗೆ 14:6).

ಒಬ್ಬನು ವಾಕ್ಯೋಪದೇಶದ ಸೇವೆಯನ್ನು ಮಾಡುವಾಗ, ಒಬ್ಬನು ಪ್ರಕಟನೆಗಳನ್ನು ತಿಳಿಸುವುದು, ಒಬ್ಬನು ಜ್ಞಾನ, ಪ್ರವಾಧನೆ ಅಥವಾ ಉಪದೇಶಗಳನ್ನು ನೀಡಬಹುದು. ಪ್ರಕಟನೆಯು ಆತ್ಮಿಕ ಸತ್ಯದ ಗುಟ್ಟನ್ನು ಹೊರತೆಗೆಯುವುದಾಗಿದೆ. ದೇವರ ವಾಕ್ಯದ ಸೇವಕರಾಗಿ ನಾವು ಪ್ರಕಟನೆಯ ಆತ್ಮನ ಮೇಲೆ ಆತುಕೊಳ್ಳುವುದನ್ನು ಕಲಿಯಬೇಕು. ಕೊಡಲ್ಪಟ್ಟಂತಹ ಯಾವುದೇ ಸಮಯದಲ್ಲಿ ಮಾತನಾಡಬೇಕಾದ ವಾಕ್ಯಗಳನ್ನು ಆತನು ನಮಗೆ ಪ್ರಕಟಪಡಿಸುತ್ತಾನೆ. ಯಾರಿಗೆ ಸತ್ಯವು ಅರ್ಪಿತವಾಗಿರುತ್ತದೊ ಅವರಿಗೆ ಆತನು ಪ್ರಕಟನೆಯ ಆತ್ಮನಾಗಿ ಅವರ ಕಣ್ಣುಗಳನ್ನು ತೆರೆಯುತ್ತಾನೆ. ಆತನು ಮೆಚ್ಚದಿದ್ದರೆ ಆಮೇಲೆ ನಮ್ಮ ವಾಕ್ಯದ ಸೇವೆಯು ಪರಿಶ್ರಮವು ಯಾವುದೇ ಆತ್ಮಿಕ ಜ್ಞಾನೋದಯವನ್ನು ಉತ್ಪಾದಿಸುವುದಿಲ್ಲ.

## ಪ್ರಕಟನೆಯ ಆತ್ಮನು ಮತ್ತು ಪ್ರವಾದನಾ ಸೇವೆ

**ಕರ್ತನಾದ ಯೆಹೋವನು ತನ್ನ ಸೇವಕರಾದ ಪ್ರವಾದಿಗಳಿಗೆ ತನ್ನ ರಹಸ್ಯವನ್ನು ತಿಳಿಸದೆ ಏನೂ ಮಾಡನು. (ಆಮೋಸ 3:7)**

**ಪ್ರವಾದಿಗಳು ಇಬ್ಬರಾಗಲಿ ಮೂವರಾಗಲಿ ಮಾತಾಡಲಿ, ಮಿಕ್ಕದವರು ಕೇಳಿ ವಿವೇಚನೆ ಮಾಡಲಿ ಕೂತಿರುವ ಮತ್ತೊಬ್ಬನಿಗೆ ಪ್ರಕಟನೆ ಉಂಟಾದರೆ ಮೊದಲಿನವನು ಸುಮ್ಮಗಾಗಲಿ. ನೀವೆಲ್ಲರು ಒಬ್ಬೊಬ್ಬರಾಗಿ ಪ್ರವಾದಿಸುವದಕ್ಕೆ ಅಡ್ಡಿಯಿಲ್ಲ, ಹೀಗೆ ಮಾಡಿದರೆ ಎಲ್ಲರೂ ಕಲಿತುಕೊಳ್ಳುವರು, ಎಲ್ಲರೂ ಎಚ್ಚರಿಕೆ ಹೊಂದುವರು** (1 ಕೊರಿಂಥದವರಿಗೆ 14:29-31)

ಪ್ರವಾದನಾ ಸೇವೆಯ ಮೂಲಕವಾಗಿ ಪ್ರಕಟನೆಯ ಆತ್ಮನು ಅತ್ಯಂತ ಬಲವಾದ ರೀತಿಯಲ್ಲಿ ಕ್ರಿಯೆ ಮಾಡುವವನಾಗಿರುತ್ತಾನೆ. ದೇವರ ಆತ್ಮನು ಪ್ರವಾದಿಗಳಿಗೆ ಯಾವುದಾದರೊಂದನ್ನು ಪ್ರಕಟಿಸುತ್ತಾನೆ. ಆಮೇಲೆ ಅವರು ಅದನ್ನು ಹೇಳಬೇಕಾದರ ಪ್ರೇಕ್ಷಕರಿಗೆ ಹೇಳುತ್ತಾರೆ.

## ಪ್ರಕಟನೆಯ ಆತ್ಮನು ಮತ್ತು ನಮ್ಮ ವೈಯಕ್ತಿಕ ಜೀವಿತಗಳು

**ಆ ಕಾಲದಲ್ಲಿ ಯೆರೂಸಲೇಮಿನಲ್ಲಿ ಸಿಮೆಯೋನನೆಂಬ ಒಬ್ಬ ಮನುಷ್ಯನಿದ್ದನು. ಈ ಮನುಷ್ಯನು ನೀತಿವಂತನು ದೇವಭಕ್ತನೂ ಆಗಿದ್ದು ಇಸ್ರಾಯೇಲ್ ಜನರನನ್ನು ಸಂತೈಸುವವನು ಯಾವಾಗ ಬಂದಾನೆಂದು ಹಾರೈಸುತ್ತಿದ್ದನು. ಮತ್ತು ಪವಿತ್ರಾತ್ಮ ಪ್ರೇರಿತನಾಗಿದ್ದನು. ಇದಲ್ಲದೆ, ಕರ್ತನು ಕಳುಹಿಸಬೇಕಾದ ಕ್ರಿಸ್ತನನ್ನು ಕಾಣುವುದಕ್ಕಿಂತ ಮುಂಚೆ ನೀನು ಸಾಯುವುದಿಲ್ಲವೆಂದು ಪವಿತ್ರಾತ್ಮನ ಮೂಲಕ ಅವನಿಗೆ ದೈವೋಕ್ತಿ ಉಂಟಾಗಿತ್ತು** (ಲೂಕ 2: 25,26)

ಪ್ರತಿಯೊಬ್ಬ ವಿಶ್ವಾಸಿಯಲ್ಲಿ ಪವಿತ್ರಾತ್ಮನು ಪ್ರಕಟನೆಯ ಆತ್ಮನಾಗಿ ಕಾರ್ಯನಿರತನಾಗಿರುತ್ತಾನೆ. ವ್ಯಕ್ತಿಗತವಾಗಿ ನಮಗೆ ದೇವರ ಉದ್ದೇಶಗಳನ್ನು ಮತ್ತು ಯೋಜನೆಗಳನ್ನು ದೇವರ ಆತ್ಮನು ಪ್ರಕಟಿಸುವುದನ್ನು ಕೇಳಲು ಮತ್ತು ಹುಡುಕಲು ಇಷ್ಟಪಡುವದು ನಮ್ಮ ಭಾಗ್ಯವಾಗಿರುತ್ತದೆ. ದೇವರ ಆತ್ಮನು ನಮ್ಮ ಜೀವಿತಗಳಲ್ಲಿ ಸಲಹೆಗಳು, ತಿದ್ದುಪಡಿ, ಪ್ರೊತ್ಸಾಹ ಮತ್ತು ಮಾರ್ಗದರ್ಶನಕ್ಕಾಗಿ ವಿಶೇಷವುಳ್ಳ ಪ್ರಕಟನೆಗಳನ್ನು ತರುತ್ತಾನೆ. ದೇವರ ಆತ್ಮನು ತರುವಂತಹ ಪ್ರಕಟನೆಗಳಿಗೆ ನಮ್ಮ ಜೀವಿತಗಳನ್ನು ತೆರೆಯುವಾಗ, ನಾವು ತಂದೆಯ ಮತ್ತು ಆತನ ಮಗನ ಮತ್ತು ಆತನ ವಾಕ್ಯದ ನಮ್ಮ ತಿಳುವಳಿಕೆಯಲ್ಲಿ, ನಮ್ಮ ಜ್ಞಾನದಲ್ಲಿ ಬೆಳವಣಿಗೆ ಹೊಂದುತ್ತೇವೆ.

- **ಕ್ರಿಸ್ತನ ದೇಹವು ಪ್ರಯಾಣದಲ್ಲಿದೆ,** ದೇವರ ಯೋಜನೆಗಳು ಆತನ ಆತ್ಮನ ಮೂಲಕವಾಗಿ ನಮಗೆ ಆತನು ಪ್ರಕಟಗೊಳಿಸಿದ, **ದೇವರ ಯೋಜಿಸಿದ ವಿಷಯಗಳನ್ನು ಆತನು ನಮಗೆ ಉಚಿತವಾಗಿ ಅಧಿಕವಾದ ವಿಷಯಗಳ ಕುರಿತು ದೇಹವು ಅಧಿಕವಾಗಿ ಪ್ರಗತಿಪರ ತಿಳುವಳಿಕೆಗೆ ಬರುತ್ತದೆ**.

- ಸಾಮಾನ್ಯವಾಗಿ ತಿಳಿದಿರುವ **ಒಂಭತ್ತು ವರಗಳು, ಆತ್ಮನ ಪ್ರಸನ್ನತೆ ಮತ್ತು ಕ್ರಿಯೆಯ ತೋರ್ಪಡಿಸುವಿಕೆ ಅಥವಾ ಅಭಿವ್ಯಕ್ತತೆಯಾಗಿದೆ**. ಜ್ಞಾನವಾಕ್ಯವನ್ನು, ವಿವೇಕದವಾಕ್ಯ, ಪ್ರವಾದನಾ ವಾಕ್ಯ ಅಥವಾ ಆತ್ಮಿಕ ಆದಿಪತ್ಯದಲ್ಲಿ ಸೂಕ್ಷ್ಮಪರಿಜ್ಞಾನದ ಉತ್ಪಾದನೆಯುನ್ನು ಬಿಡುಗಡೆಗೊಳಿಸುವ ಏನೋ ಒಂದನ್ನು ಮಾನವ ಪಾತ್ರೆಗಳಿಗೆ ಬಿಡುಗಡೆ ಗೊಳಿಸಲ್ಪಡುತ್ತದೆ.

- ನಾವು **ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ,** ಪವಿತ್ರಾತ್ಮನು ಪ್ರಕಟನೆಯ ಆತ್ಮನಂತೆ, **ಮಧ್ಯಸ್ಥಿಕೆಯ ಆತ್ಮನಂತೆ ಮತ್ತು ಬಹಳ ಅಧಿಕವಾದವುಗಳ ಮೂಲಕ ನಮ್ಮಲ್ಲಿ ಕ್ರಿಯೆ ಮಾಡಲು** ನಾವು ಅವಕಾಶ ನೀಡುತ್ತಿರುತ್ತೇವೆ.

- ಒಬ್ಬನು ವಾಕ್ಯದ ಸೇವೆ ಸಲ್ಲಿಸುತ್ತಿರುವಾಗ, ಒಬ್ಬನು ಪ್ರಕಟನೆ, ಜ್ಞಾನ, ಪ್ರವಾದನೆ ಮತ್ತು ಉಪದೇಶಗಳನ್ನು ತಿಳಿಸುತ್ತಾನೆ. ಪ್ರಕಟನೆಯು ಆತ್ಮಿಕ ಸತ್ಯದ ಗುಟ್ಟನ್ನು ಹೊರತೆಗೆಯುವುದಾಗಿರುತ್ತದೆ.

- ಪ್ರಕಟನೆಯ ಆತ್ಮನು, **ಪ್ರವಾದನಾ ಸೇವೆಯ ಮೂಲಕವಾಗಿ** ಅತ್ಯಂತ ಪ್ರಬಲವಾದ ರೀತಿಯಲ್ಲಿ ಕಾರ್ಯೋನ್ಮುಖನಾಗಿದ್ದಾನೆ.

- ಪ್ರತಿಯೊಬ್ಬ **ವಿಶ್ವಾಸಿಯಲ್ಲಿ ಪವಿತ್ರಾತ್ಮನು, ಪ್ರಕಟನೆಯ ಆತ್ಮನಾಗಿ** ಕಾರ್ಯನಿರತನಾಗಿದ್ದಾನೆ.

- ನಮ್ಮ ಪ್ರತಿಯೊಬ್ಬರ **ಜೀವಿತದಲ್ಲಿ, ಸಲಹೆ, ತಿದ್ದುಪಡಿ, ಪ್ರೋತ್ಸಾಹ ಮತ್ತು ಮಾರ್ಗದರ್ಶನಕ್ಕಾಗಿ** ದೇವರ ಆತ್ಮನು ವಿಶೇಷ ಪ್ರಕಟನೆಯನ್ನು ತರುತ್ತಾನೆ.

# 3

# ಬಲದ ಆತ್ಮನು

ನಾವು ಹಾಡುವಂತಹ ಹಳೆಯ ಆಂಗ್ಲಭಾಷೆಯ ಒಂದು ಸಂಗೀತವಿದೆ

*“ಪ್ರಪಂಚದಾದ್ಯಂತ ಆತ್ಮನು ಚಲಿಸುತ್ತಿದ್ದಾನೆ*
*ಪ್ರಪಂಚದಾದ್ಯಂತ.*
*ಪ್ರವಾದಿಗಳು ಹೇಳಿದ ಹಾಗೆ*
*ಇದು ಪ್ರಪಂಚದಾದ್ಯಂತವಿರುತ್ತದೆ.*
*ಸಮುದ್ರವನ್ನು ನೀರು ಆವರಿಸಿಕೊಳ್ಳುವಂತೆ*
*ಅಲ್ಲಿ ಕರ್ತನ ಮಹಿಮೆಯ ಪ್ರಬಲ ಪ್ರಕಟನೆಯಿರುತ್ತದೆ.”*

ಇದು ಎಷ್ಟು ಸತ್ಯವಾಗಿದೆ! ಇತ್ತೀಚಿನ ಸಮಯಗಳಲ್ಲಿ ಪ್ರಪಂಚದಾದ್ಯಂತ ದೇವರ ಆತ್ಮನ ಚಲನೆಯಲ್ಲಿ ಮುಂದುವರಿಯುತ್ತಿರುವ ಪ್ರಗತಿ ಬಗ್ಗೆ ಸಭೆಗಳು ಸಾಕ್ಷಿಕೊಡುತ್ತಿವೆ. ಪ್ರಧಾನ ಪಂಗಡಗಳ ಸಭೆಗಳು ಸಹ ದೇವರ ಆತ್ಮನ ಬಲವಾದ ಚಲಿಸುವಿಕೆಗೆ ಒಳಗಾಗಿವೆ. ಇಂದಿನ ದಿನಗಳ ಪವಿತ್ರಾತ್ಮನ ಚಲನೆಯ ಒಂದು ಗುಣಲಕ್ಷಣವು ಸ್ವಸ್ಥತೆಗಳು, ಅದ್ಭುತಗಳು, ಮತ್ತು ದೈವ್ವಗಳ ಕಾರ್ಯಚಟುವಟಿಕೆಗಳನ್ನು ಉರುಳಿಸುವ ಮೂಲಕವಾಗಿ ಆತನ ಬಲದ ಪ್ರಬಲ ಪ್ರದರ್ಶನಗಳ ಪ್ರಮಾಣದ ಹೆಚ್ಚಳವಾಗಿದೆ.

ಈ ಅಧ್ಯಾಯದಲ್ಲಿ, ಪವಿತ್ರಾತ್ಮನ ಈ ನಿರ್ದಿಷ್ಟ ವಿಷಯಾಂಶದ ಕೆಲಸಗಳ ಬಗ್ಗೆ ನಾವು ಅವಲೋಕನ ಮಾಡಲು ಇಚ್ಛಿಸುತ್ತೇವೆ. ಇದು ನಿಮಗೆ ಪವಿತ್ರಾತ್ಮನನ್ನು, ಬಲದ ಆತ್ಮನಾಗಿ ಪರಿಚಯಿಸುತ್ತದೆ ಎಂಬುದಾಗಿ ನಾವು ನಂಬುತ್ತೇವೆ. ಈ ಅಧ್ಯಯನವು ಆತನ ಬಲದ ಪ್ರಬಲ ಪ್ರದರ್ಶನದ ಮೂಲಕ ಆತನ ಪ್ರಸನ್ನತೆಯ ತೋರ್ಪಡಿಸುವಿಕೆಯನ್ನು ನೀವು ಶ್ರದ್ಧೆಯಿಂದ ಇಚ್ಛೆಪಡಲು ಪ್ರೋತ್ಸಾಹಿಸುತ್ತದೆ.

## ದೇವರ ಆತ್ಮನು - ಬಲದ ಆತ್ಮನು

**ಇಷಯನ ಬುಡದಿಂದ ಒಂದು ಚಿಗುರು ಒಡೆಯುವದು, ಅದರ ಬೇರಿನಿಂದ ಹೊರಟ ತಳಿರು ಫಲಿಸುವದು; ಆ ಅಂಕುರದ ಮೇಲೆ ಜ್ಞಾನವಿವೇಕದಾಯಕ ಆತ್ಮ, ಆಲೋಚನ ಪರಾಕ್ರಮಗಳನ್ನು ಹುಟ್ಟಿಸುವ ಆತ್ಮ**

**ತಿಳುವಳಿಕೆಯನ್ನು ಯೆಹೋವನ ಭಯವನ್ನು ಉಂಟುಮಾಡುವ ಆತ್ಮ ಅಂತು ಯೆಹೋವನ ಆತ್ಮವೇ ನೆಲೆಗೊಂಡಿರುವದು** (ಯೆಶಾಯ 11:12)

ಯೆಶಾಯ 11: 1, 2 ರಲ್ಲಿ ವ್ಯಾಖ್ಯಾನಿಸಿರುವ ಪವಿತ್ರಾತ್ಮನ ವಿವಿಧ ಮುಖಗಳಲ್ಲಿ ''ಬಲದ ಆತ್ಮನು'' ಒಂದಾಗಿದೆ. ಇದು ಪವಿತ್ರಾತ್ಮನು ಸಂಪೂರ್ಣವಾಗಿ ಬಲ, ಸಾಮರ್ಥ್ಯ ಪ್ರಬಲ ಮತ್ತು ರಭಸ, ಶಕ್ತಿ, ಇರುವವನೆಂಬುದಾಗಿ ಪ್ರಕಟಗೊಳಿಸುತ್ತದೆ. ದೇವರ ಆತ್ಮನು ಮಹತ್ಕಾರ್ಯಗಳನ್ನು ಮಾಡಲು ಶಕ್ತನಾಗಿದ್ದಾನೆಂಬುದಾಗಿ ಇದು ಪ್ರಕಟಪಡಿಸುತ್ತದೆ. ಆತನು ಬಲದ ಆತ್ಮನಾಗಿದ್ದಾನೆ. ಆತನು ವಿಷಯಗಳು ಜರುಗುವಂತೆ ಮಾಡಲು ಶಕ್ತನಾಗಿದ್ದಾನೆ.

ಪವಿತ್ರಾತ್ಮನು ಬಲದ ಆತ್ಮನಾಗಿ ಈ ದಿನಗಳಲ್ಲಿ ಕೂಡ ಕಾರ್ಯನಿರತನಾಗಿದ್ದಾನೆ. ಆತನು ಆತನ ಯಾವುದೇ ಬಲವನ್ನು ಕಳೆದುಕೊಂಡಿಲ್ಲ ಆತನು ಬದಲಾಗುವುದಿಲ್ಲ. ದೇವರ ಆತ್ಮನು, ಜನರು, ಸ್ಥಳಗಳು ಮತ್ತು ವಿಷಯಗಳ ಮೇಲೆ ಆತನ ಬಲವನ್ನು ವಿಸ್ತರಿಸುತ್ತಾನೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಜನರು (ಒಬ್ಬ ವ್ಯಕ್ತಿ ಮತ್ತು ಸಮೂಹಗಳು) ಸ್ಥಳಗಳು (ಸಂಪೂರ್ಣ ಭೌಗೋಳಿಕ ಪ್ರದೇಶಗಳು - ನಗರಗಳು, ಹಳ್ಳಿಗಳು ಸಂದರ್ಶನ ಸ್ಥಳಗಳು) ಮತ್ತು ಸ್ವಾಭಾವಿಕವಾದ, ಪ್ರಾಪಂಚಿಕ ವಿಷಯಗಳು (ಬಟ್ಟೆಯ ತುಂಡು, ಹವಾಮಾನ ಮುಂತಾದವುಗಳು) ದೇವರ ಆತ್ಮನ ಬಲದಿಂದ ಪ್ರಭಾವಿತಗೊಳ್ಳಬಹುದು, ಬದಲಾಗಬಹುದು ಮತ್ತು ಪರಿಣಾಮಕ್ಕೆ ಒಳಗಾಗಬಹುದು. ಉದಾರಹಣೆಗೆ ದೇವರ ಆತ್ಮನು ಒಬ್ಬ ವ್ಯಕ್ತಿಯ ಶಾರೀರಿಕ ದೇಹದ ಮೇಲೆ ಚಲಿಸಬಹುದು ಮತ್ತು ಎಲ್ಲಾ ರೋಗಗಳು ಬೇನೆಗಳು, ಅವು ಏನಾದರೂ ತತ್‌ಕ್ಷಣದಲ್ಲಿ ತೆಗೆದು ಹಾಕುತ್ತಾನೆ. ಇನ್ನು ಒಂದು ಉದಾಹರಣೆ ಪವಿತ್ರಾತ್ಮನ ಬಲದಿಂದ ಟ್ಯೂಮರ್ (ಗಡ್ಡೆ) ತೆಗೆದು ಹಾಕಲ್ಪಡಬಹುದು ಅಂಗಗಳು ಸೃಷ್ಟಿಸಲ್ಪಡಬಹುದು. ಹಳೆಯ ಅಂಗವು ಹೊಸದರಿಂದ ಬದಲಿಯಾಗಬಹುದು, ರಕ್ತದ ವ್ಯವಸ್ಥೆಯು ಶುದ್ಧೀಕರಣಗೊಳ್ಳಬಹುದು, ಎಲ್ಲಾ ಬೇನೆಗಳ ಕುರುಹುಗಳು ಸಂಪೂರ್ಣವಾಗಿ ಕಾಣದಂತಾಗಬಹುದು. ದೇವರ ಆತ್ಮನು ಸಭೆಯಾಗಿ ಒಟ್ಟುಗೂಡಿದ ಜನರು ಕೆಲವರಿರಬಹುದು ಅಥವಾ ಅನೇಕ ಸಾವಿರಗಳಲ್ಲಿರಬಹುದು, ಅವರ ಮೇಲೆ ಸಂಚರಿಸಬಹುದು ಮತ್ತು ಅನೇಕರನ್ನು ಮುಟ್ಟಬಹುದು ಅದೇ ಸಮಯದಲ್ಲಿ ಅವರ ಜೀವಿತಗಳಲ್ಲಿ ಅದ್ಭುತಗಳನ್ನು ಮಾಡಬಹುದು. ಸ್ವಸ್ಥತೆಗಳು ಮತ್ತು ಅದ್ಭುತಗಳ ಮೂಲಕ ಆತನ ಪ್ರಬಲ ಪ್ರಸನ್ನತೆಯ ಪ್ರದರ್ಶನಗಳನ್ನು ಬಿಡುಗಡೆಗೊಳಿಸುವುದರಲ್ಲಿ ಪಶ್ಚಾತ್ತಾಪಪಡಲು ಮತ್ತು ಕರ್ತನಾದ

ಯೇಸುವಿನ ಕಡೆಗೆ ತಿರುಗಿಕೊಳ್ಳಲು ಕಾರಣವಾಗುವ ''ಆತ್ಮಿಕ ಪರಿಸರದಲ್ಲಿ'' ಬದಲಾವಣೆ ತರಲು ಆತನು ಸಂಪೂರ್ಣ ಹಳ್ಳಿ ಮತ್ತು ನಗರಗಳ ಮೇಲೆ ಸಂಚರಿಸುತ್ತಾನೆ. ಬಟ್ಟೆಯ ತುಂಡು ವಸ್ತ್ರಗಳಂತಹ ಪ್ರಾಪಂಚಿಕ (ಭೌತಿಕ) ವಿಷಯಗಳ ವಾಸ್ತವ್ಯದಲ್ಲಿ ದೇವರ ಆತ್ಮನು, ಆತನ ಬಲವನ್ನು ಉಂಟು ಮಾಡುತ್ತಾನೆ. ಈ ಬಟ್ಟೆ/ ವಸ್ತ್ರಗಳು ನಿರ್ದಿಷ್ಟ ಸಮಾಯಾವಧಿಗಾಗಿ ಆತ್ಮನ ಬಲದ ಸಾಗಿಸುವ ವಸ್ತು/ ಸಂಗ್ರಹಗಳಾಗಿ ಕಂಡುಬರುತ್ತವೆ. ಈ ಬಲವು ಹೊರ ಇತರ ವಿಷಯಗಳಲ್ಲಿ ಪರಿಣಾಮ ಬೀರಬಹುದು, ಉದಾಹರಣೆಗೆ ರೋಗಿಗಳಾದ ಜನರು, ಆ ವಸ್ತ್ರ/ ಬಟ್ಟೆಯೊಡನೆ ಸಂಪರ್ಕಕ್ಕೆ ಬರುವಾಗ ಗುಣಹೊಂದಬಹುದು. ದೇವರ ಆತ್ಮನು ಹವಾಮಾನದ ಮೂಲ ವಸ್ತುಗಳಾದ - ಗಾಳಿ, ಮೋಡಗಳು ಮುಂತಾದವುಗಳ ಮೇಲೆ ಚಲಿಸುತ್ತಾನೆ, ಅವುಗಳನ್ನು ಬದಲಾಯಿಸುತ್ತಾನೆ.

## ಸೃಷ್ಟಿಯಲ್ಲಿ ಆತ್ಮನ ಬಲ

**ಆದಿಯಲ್ಲಿ ದೇವರು ಆಕಾಶವನ್ನು ಭೂಮಿಯನ್ನು ಉಂಟುಮಾಡಿದನು. ಭೂಮಿಯು ಕ್ರಮವಿಲ್ಲದೆಯೂ ಬರಿದಾಗಿಯೂ ಇತ್ತು. ಆದಿಸಾಗರದ ಮೇಲೆ ಕತ್ತಲಿತ್ತು. ದೇವರಾತ್ಮವು ಜಲ ಸಮೂಹಗಳ ಮೇಲೆ ಚಲಿಸುತ್ತಿತ್ತು. ಆಗ ದೇವರು - ಬೆಳಕಾಗಲಿ ಅನ್ನಲು ಬೆಳಕಾಯಿತು.** (ಆದಿಕಾಂಡ 1:1-3)

**ದೇವರಾತ್ಮವು ಜಲಸಮೂಹಗಳ ಮೇಲೆ ಚಲಿಸುತ್ತಿದ್ದಾಗ ಸರ್ವಶಕ್ತನಾದ ದೇವರು ಆತನ ಮಾತುಗಳನ್ನು ನುಡಿದನು.** (ಕೀರ್ತನೆ 104:30)

ದೇವರಾತ್ಮವು ಜಲ ಸಮೂಹಗಳ ಮೇಲೆ ಚಲಿಸುತ್ತಿತ್ತು. ಸರ್ವಶಕ್ತನಾದ ದೇವರು ಆತನ ಮಾತುಗಳನ್ನು ನುಡಿದನು. ದೇವರ ಚಟುವಟಿಕೆಗಳ ಅನುಕ್ರಮವು ಬಹಳ ಪ್ರಾಮುಖ್ಯ. ಮೊದಲು ದೇವರ ಆತ್ಮನು, ಅತಿ ವಿಶಾಲ ಬಡಾವಣೆಯನ್ನು ಆವರಿಸುತ್ತಾನೆ. ಆಮೇಲೆ ಆ ಪ್ರಾಂತ್ಯದ ಮೇಲೆ ವಾಕ್ಯವು ನುಡಿಯಲ್ಪಡುತ್ತದೆ. ಆಮೇಲೆ ವಿಷಯಗಳು ಸಂಭವಿಸಲು ಪ್ರಾರಂಭಿಸುತ್ತವೆ. ಇದು ದೇವರಾತ್ಮನು, ತ್ರೈಯೆಕ ದೇವರ ಉದ್ದೇಶಗಳನ್ನು ನಿರ್ವಹಿಸುವವನಾಗಿರುವಂತೆ ತೋರಿಸುತ್ತದೆ. ಆತನು ಸೃಷ್ಟಿಸುವಾತನು ಬದಲಾಯಿಸುವಾತನು, ರೂಪಿಸುವಾತನು, ಆಕೃತಿಕೊಡುವಾತನು) ಮತ್ತು ನುಡಿಯಲ್ಪಟ್ಟಂತಹ ವಾಕ್ಯದ ಅನುರೂಪತೆಯಲ್ಲಿ ಸ್ವಾಭಾವಿಕ ಪ್ರಪಂಚವನ್ನು ರೂಪಿಸುವಾತನಾಗಿದ್ದಾನೆ.

- **ಪವಿತ್ರಾತ್ಮನ ಬಲದಿಂದ,** ಗಡ್ಡೆ ತೆಗೆದುಹಾಕಲ್ಪಡುತ್ತದೆ, ಶರೀರದ ಅಂಗಗಳು ಸೃಷ್ಟಿಸಲ್ಪಡುತ್ತವೆ. ಹಳೆಯ ಅಂಗಾಂಗಗಳು ಹೊಸದಾಗಿ ಬದಲಾಗಿ ಬರುತ್ತವೆ. ರಕ್ತದ ವ್ಯವಸ್ಥೆ ಶುದ್ಧೀಕರಿಸಲ್ಪಡುತ್ತದೆ. **ಪ್ರತಿಯೊಂದು ರೋಗದ ಸುಳಿವು** ಸಂಪೂರ್ಣವಾಗಿ ಕಾಣೆಸದಂತಾಗುತ್ತದೆ.
- **ಅದ್ಭುತಗಳ ಮತ್ತು ಸ್ವಸ್ಥತೆಗಳ ಮೂಲಕವಾಗಿ** ಆತನ ಪ್ರಸನ್ನತೆಯ ಪ್ರಬಲ ಪ್ರದರ್ಶನವನ್ನು ಬಿಡುಗಡೆಗೊಳಿಸುವ ಪಶ್ಚಾತ್ತಾಪ ಮತ್ತು ಕರ್ತನಾದ ಯೇಸುವಿನ ಕಡೆಗೆ ತಿರುಗಿಸಲು ಕಾರಣವಾಗುವ **''ಆತ್ಮಿಕ ಪರಿಸರದಲ್ಲಿ'' ಸಂಪೂರ್ಣ ಹಳ್ಳಿ ಅಥವಾ ನಗರದ ಮೇಲೆ ಬದಲಾವಣೆ ತರುವಲ್ಲಿ** ಪವಿತ್ರಾತ್ಮನು ಚಲಿಸುವವನಾಗಿದ್ದಾನೆ.
- ದೇವರ ಆತ್ಮನು **ವಸ್ತ್ರದ ತುಂಡು/ಬಟ್ಟೆ** ಮುಂತಾದ ಭೌತಿಕ ವಸ್ತುಗಳಲ್ಲಿ ಆತನ ಬಲವು ನೆಲೆಗೊಳ್ಳುವಂತೆ ಮಾಡಬಹುದು

## ಬಲದ ಆತ್ಮನು ದೈಹಿಕ ಬಲದ ಪಾಲು ಕೊಡುತ್ತಾನೆ

**ಅವನ ಕೈಯಲ್ಲಿ ಏನೂ ಇಲ್ಲದಿದ್ದರೂ ಯೆಹೋವನ ಆತ್ಮವು ಅವನ ಮೇಲೆ ಫಕ್ಕನೆ ಬಂದದ್ದರಿಂದ ಆ ಸಿಂಹವನ್ನು ಹೋತ ಮರಿಯನ್ನೋ ಎಂಬಂತೆ ಸೀಳಿಬಿಟ್ಟನು ಈ ಸಂಗತಿಯನ್ನು ತಂದೆ ತಾಯಿಗಳಿಗೆ ತಿಳಿಸಲಿಲ್ಲ. ಯೆಹೋವನ ಆತ್ಮವು ಫಕ್ಕನೆ ಅವನ ಮೇಲೆ ಬಂದಿತು. ಅವನು ಅಷ್ಕೆಲೋನಿಗೆ ಹೋಗಿ ಅಲ್ಲಿ ಮೂವತ್ತು ಮಂದಿಯನ್ನು ಹೊಡೆದು ಅವರ ವಸ್ತ್ರಗಳನ್ನು ಸುಲುಕೊಂಡು ಒಗಟನ್ನು ಬಿಚ್ಚಿದವರಿಗೆ ತಂದುಕೊಟ್ಟನು** (ನ್ಯಾಯಸ್ಥಾಪಕರು 14:6,19 ಅ).

**ಅವನನ್ನು ಎರಡು ಹೊಸ ಹಗ್ಗಗಳಿಂದ ಕಟ್ಟಿ ಗಿರಿಯಿಂದ ತಂದರು. ಸಂಸೋನನು ಲೆಹೀಯ ಸಮೀಪಕ್ಕೆ ಬರಲು ಫಿಲಿಷ್ಟಿಯರು ಅವನನ್ನು ಕಂಡು ಆರ್ಭಟಿಸಿದರು. ಯೆಹೋವನ ಆತ್ಮವು ಅವನ ಮೇಲೆ ಬಂದದ್ದರಿಂದ ಅವನ ರಟ್ಟೆಗಳಿಗೆ ಸುತ್ತಲೂ ಕಟ್ಟಿದ್ದ ಹಗ್ಗಗಳು ಸುಟ್ಟ ಸೆಣಬಿನ ಹಾಗಾದವು; ಕೈಗೆ ಹಾಕಿದ ಬೇಡಿಗಳು ಕಳಚಿಬಿದ್ದವು. ಅಲ್ಲಿ ಒಂದು ಕತ್ತೆಯ ದವಡೆ ಎಲುಬು ಬಿದ್ದಿತ್ತು ಅದು ಇನ್ನೂ ಹಸಿ ಇತ್ತು. ಅವನು ಅದನ್ನು ತೆಗೆದುಕೊಂಡು ಅದರಿಂದ ಸಾವಿರ ಜನರನ್ನು ಹತಿಸಿಬಿಟ್ಟು....** (ನ್ಯಾಯಸ್ಥಾಪಕರು 15:13ಬಿ - 15)

**ಆಗ ಎಲೀಯನು ಅವನಿಗೆ - ನೀನು ಹೋಗಿ ಅಹಾಬನಿಗೆ ಬೇಗನೆ ರಥವನ್ನು ಹೊಡಿಸಿಕೊಂಡು ಮಳೆಯು ನಿನ್ನನ್ನು ತಡೆಯದಂತೆ ಬೆಟ್ಟವನ್ನಿಳಿದು ಹೋಗು ಎಂದು ಹೇಳು ಅಂದನು. ತುಸು ಹೊತ್ತಿನಲ್ಲಿಯೇ ಆಕಾಶವು ಮೋಡ ಗಾಳಿಗಳಿಂದ ಕಪ್ಪಾಗಿ ದೊಡ್ಡ ಮಳೆಯು ಪ್ರಾರಂಭವಾಯಿತು. ಅಹಾಬನು ರಥದಲ್ಲಿ**

**ಕೂತುಕೊಂಡು ಇಜ್ರೇಲಿಗೆ ಹೋದನು. ಯೆಹೋವನ ಹಸ್ತವು ಎಲೀಯನ ಸಂಗಡ ಇದ್ದದರಿಂದ ಅವನ ನಡುಕಟ್ಟಿಕೊಂಡು ಅಹಾಬನ ಮುಂದೆ ಓಡುತ್ತಾ ಇಜ್ರೇಲನ್ನು ಸೇರಿದನು.** (1 ಅರಸುಗಳು 44ಬಿ - 46)

ಮೇಲಿನ ಎಲ್ಲಾ ವಚನಭಾಗಗಳು, ದೇವರ ಆತ್ಮನು ಜನರ ಮೇಲೆ ಚಲಿಸಲು ಶಕ್ತನಾಗಿದ್ದಾನೆ. ಮತ್ತು ಪ್ರಕೃತ್ಯತೀತವಾದ ದೈಹಿಕ ಬಲ ಮತ್ತು ದಕ್ಷತೆಯನ್ನು ಹಂಚಿಕೊಡುತ್ತಾನೆ. ಎಂಬುದಾಗಿ ನಿಖರವಾಗಿ ತೋರಿಸುತ್ತದೆ. ಸಂಸೋನನು ಸಿಂಹವನ್ನು ಬರಿದಾದ ಕೈಯಲ್ಲಿ ಸೀಳಿಬಿಟ್ಟು ಕೊಲ್ಲಲು, ಅನೇಕ ಮಂದಿಯನ್ನು ಸದೆಬಡಿಯಲು ಮತ್ತು ಅವನನ್ನು ಕಟ್ಟಿದ್ದ ಹಗ್ಗಗಳನ್ನು ಮುರಿದುಹಾಕಲು ಸಾಧ್ಯವಾದವು ಯಾಕೆಂದರೆ ''ಯೆಹೋವನ ಆತ್ಮವು ಅವನ ಮೇಲೆ ಪ್ರಬಲವಾಗಿ ಬಂದದ್ದರಿಂದಲೇ''. ಅದೇ ರೀತಿಯಾಗಿ ಕುದುರೆಯ ರಥಗಳಿಗಿಂತಲೂ ವೇಗವಾಗಿ ಓಡುವ ಮನುಷ್ಯನ ಕುರಿತು ಊಹಿಸಿಕೊಳ್ಳಿರಿ, ಸ್ವಾಭಾವಿಕವಾಗಿ ಮಾತಾನಾಡುವುದಾದರೆ ಇದು ಸಾಧ್ಯವಾಗುವುದಿಲ್ಲ. ಹಾಗಿದ್ದರೂ,''ಕರ್ತನ ಬಲ'' ಎಂಬುದಾಗಿ ವ್ಯಾಖ್ಯಾನಿಸಿರುವ ಕರ್ತನ ಆತ್ಮನ ಬಲದಲ್ಲಿ ಬಂದದ್ದರಿಂದ ಎಲೀಯನು ಅದನ್ನು ಮಾಡಲು ಶಕ್ತಿಗೊಂಡನು. ಪವಿತ್ರಾತ್ಮನು ಬದಲಾಗಿಲ್ಲ ಹಿಂದಿನ ದಿನಗಳಲ್ಲಿ ಆತನು ಮಾಡಿದವುಗಳನ್ನು ನಮ್ಮ ದಿನನಿತ್ಯಗಳಲ್ಲಿ ಮಾಡಲು ಆತನು ಶಕ್ತನಾಗಿದ್ದಾನೆ. ಯಾಕೆಂದರೆ ಸಮಯಗಳು ಬದಲಾಗಿವೆ, ನಾವು ಕುದುರೆಯ ರಥಗಳಿಗಿಂತ ವೇಗವಾಗಿ ಓಡುವ ಅಥವಾ ಸಿಂಹಗಳನ್ನು ಕೊಲ್ಲುವುದಕ್ಕೆ ಪ್ರಕೃತ್ಯಾತೀತ ಬಲವು ನಮಗೆ ಬೇಕಾದ ಪರಿಸ್ಥಿತಿಗಳಲ್ಲಿ ನಾವುಗಳಿಲ್ಲ. ಹಾಗಿದ್ದರೂ, ನಮ್ಮ ಶಾರೀರಿಕ ದೇಹಗಳ ಮೇಲೆ ದೇವರ ಆತ್ಮನು ಪ್ರಕೃತ್ಯಾತೀತವಾಗಿ ಬಲಗೊಳಿಸುವ ಕ್ಷೇತ್ರಗಳಲ್ಲಿ ನಾವು ಅನುಭವ ಪಡೆಯಬಹುದಾದ ಕ್ಷೇತ್ರಗಳಿವೆ. ಉದಾಹರಣೆಗೆ, ನೀವು ಕೆಲಸದಲ್ಲಿ ದೀರ್ಘವಾದ ದಿನದ ಕೆಲಸ ಹೊಂದಿರಬಹುದು ಆಮೇಲೆ ನೀವು ಯಾರಿಗಾದರೂ ಸೇವೆ ಸಲ್ಲಿಸುವ ಪರಿಸ್ಥಿತಿಯಲ್ಲಿ ಇರಿಸಲ್ಪಡಬಹುದು. ನೀವು ದೈಹಿಕವಾಗಿ ಮತ್ತು ಮಾನಸಿಕವಾಗಿ ದಣಿದಿರಬಹುದು ಆದರೆ ಆ ಕ್ಷಣದಲ್ಲೇ, ನೀವು ಹೋಗಿ ಅಗತ್ಯತೆಯಲ್ಲಿರುವವರಿಗೆ ಸೇವೆಸಲ್ಲಿಸುವ ಗುರಿಯನ್ನು ಪೂರ್ತಿಗೊಳಿಸಲು ದೇವರ ಆತ್ಮನು ನಿಮ್ಮ ದೇಹ ಮತ್ತು ಮನಸ್ಸುಗಳನ್ನು ಪ್ರಕೃತ್ಯಾತೀತವಾಗಿ ಬಲಗೊಳಿಸುತ್ತಾನೆ. (ರೋಮಾಪುರದವರಿಗೆ 8:11 ನ್ನು ಸಹ ನೋಡಿರಿ)

## ಬಲದ ಆತ್ಮನು ವಿರೋಧವನ್ನು ಉರುಳಿಸುತ್ತಾನೆ

**ಆಗ ಅವನು (ದೇವದೂತನು) ನನಗೆ ಪ್ರತ್ಯುತ್ತರವಾಗಿ ಹೀಗೆ ಹೇಳಿದನು ಪರಾಕ್ರಮದಿಂದಲ್ಲ ಬಲದಿಂದಲ್ಲ; ನನ್ನ ಆತ್ಮದಿಂದಲೇ ಎಂಬದು ಸೇನಾಧೀಶ್ವರ ಯೆಹೋವನ ನುಡಿ ಎಂಬೀ ಮಾತನ್ನು ಯೆಹೋವನು ಜೆರುಬ್ಬಾಬೆಲನಿಗೆ ದಯಪಾಲಿಸಿದ್ದಾನೆ. ದೊಡ್ಡ ಬೆಟ್ಟವೇ, ನೀನು ಯಾರು? ಜೆರುಬ್ಬಾಬೆಲನ ಮುಂದೆ ನೆಲಸಮವಾಗುವಿ; ಅವನು ಕಲಶದ ಕಲ್ಲನ್ನು ಕೊಲಾಹಲದೊಡನೆ ಮೆರವಣಿಗೆ ಮಾಡುವನು; ಇದರ ಮೇಲೆ ದೇವರ ದಯೆಯಿರಲಿ, ದೇವರ ದಯೆಯಿರಲಿ ಎಂಬ ಜನಘೋಷವಾಗುವದು** (ಜೆಕರ್ಯ 4:6-7)

**ಹೀಗಿರಲು ಪಡುವಣವರು ಯೆಹೋವನ ನಾಮಕ್ಕೆ ಹೆದರುವರು, ಮೂಡಣವರು ಆತನ ಮಹಿಮೆಗೆ ಅಂಜುವರು; ಬಿರುಗಾಳಿಯಿಂದ ಹೊಡೆಯಲ್ಪಟ್ಟು ಇಕ್ಕಟ್ಟಿನಲ್ಲಿ ಹರಿಯುವ ತೊರೆಯ ಹಾಗೆ ಆತನು ರಭಸದಿಂದ ಬರುವನಷ್ಟೆ** (ಯೆಶಾಯ 59:19)

ಜೆರುಬ್ಬಾಬೆಲ ಮತ್ತು ಮಹಾಯಾಜಕನಾದ ಯೆಹೋಶುವನ ನಾಯಕತ್ವದಲ್ಲಿ ತಮ್ಮ ತವರುನಾಡಿಗೆ ಹಿಂತುರುಗಿ ಯೆಹೊದ್ಯರಿಗೆ ದೇವಾಲಯವನ್ನು ತಿರುಗಿ ಕಟ್ಟಬೇಕೆಂದು ವಿಧಿಸಿದ ಕೆಲಸಹೊಂದಿದ್ದರು ಹಾಗಿದ್ದರೂ ಕೆಲಸವನ್ನು ನಿಲ್ಲುವಂತೆ ಮಾಡಿದ ನೆರೆಯುವರಾದ ಸಮಾರ್ಯದವರ ವಿರೋಧವನ್ನು ಅವರು ಎದುರಿಸಬೇಕಾಯಿತು. ಹನ್ನೆರಡು ವರ್ಷಗಳ ನಂತರ ಜೆಕರ್ಯ ಮತ್ತು ಹಗ್ಗಾಯರಂತಹ ಪ್ರವಾದಿಗಳ ಪ್ರೋತ್ಸಾಹದೊಡನೆ ದೇವಾಲಯದ ಕೆಲಸವನ್ನು ತಿರುಗಿ ಪ್ರಾರಂಭಿಸಿಲು ಜನರು ಪುನಃ ಪ್ರಚೋದಿಸಲ್ಪಟ್ಟರು. ಯೆಹೂದದ ರಾಜ್ಯಪಾಲನಾಗಿದ್ದಂತಹ ಜೆರುಬ್ಬಾಬೆಲನು, ಈ ಯೋಜನೆಯ ಪ್ರಾಥಮಿಕ ಜವಾಬ್ದಾರನಾಗಿದ್ದನು ಜೆಕರ್ಯ 4:6,7ರಲ್ಲಿ ದೇವರ ಆತ್ಮನ ಬಲದಿಂದಲೇ ದೇವರ ಕಾರ್ಯಗಳು ಸಾಧಿಸಲ್ಪಟ್ಟಿದೆ ಎಂಬುದಾಗಿ ನಿಖರವಾಗಿ ತಿಳಿಸಲ್ಪಟ್ಟಿದೆ. ಎಲ್ಲಾ ವಿರೋಧದ ಪರ್ವತಗಳು, ''ಸಮ ನೆಲವಾಗಿ'' ಕಂಡು ಬರುತ್ತವೆ. ಯಾವಾಗ ಒಬ್ಬ ವ್ಯಕ್ತಿ ಅಥವಾ ಸ್ತ್ರೀ ದೇವರಿಂದ ಆದೇಶಾಧಿಕಾರ ಹೊಂದಿದ್ದರೋ ಮತ್ತು ವಿಶೇಷವಾಗಿ ವಿಧಿಸಿದ ಕೆಲಸವನ್ನು ನೆರವೇರಿಸಲು ಆತ್ಮನಿಂದ ಅಭಿಷೇಕಿಲ್ಪಟ್ಟಿದ್ದಾರೋ ಆಗ ಯಾವುದೇ ರೀತಿಯ ವೈರಿಯ ಕಾರ್ಯಗಳು ಅಥವಾ ವಿರೋಧಗಳು ಗೆಲ್ಲಲು ಸಾಧ್ಯವಾಗುವುದಿಲ್ಲ. ಆತ್ಮನ ಬಲದ ಮೂಲಕವಾಗಿ ವಿಧಿಸಿದ ಕೆಲಸಗಳು ಸಂಪೂರ್ಣಗೊಳ್ಳುತ್ತವೆ.

ದೇವರ ಆತ್ಮನಿಂದ ಶಕ್ತಗೊಳಿಸಲ್ಪಡುವುದು ಅತೀ ಪ್ರಾಮುಖ್ಯವಾದುದೆಂದು ಇದು ತೋರಿಸುತ್ತದೆ. ಇದು ಉಪದ್ರವಕ್ಕೆ ಎದುರು ನಿಲ್ಲುವ ಧಾರ್ಮಿಕ ಪ್ರಯತ್ನವಲ್ಲ

ಆದರೆ ಅಭಿಷೇಕವಾಗಿದೆ. ಇದು ಒಂದು ಜಯಶಾಲಿಯಾಗುವ ಅಭಿಷೇಕದ ಸಭೆಯಾಗಿದೆ.

## ಮಹೋನ್ನತನ ಬಲ

**ಆ ದೂತನು ಆಕೆಗೆ ಮರಿಯಳೇ, ಹೆದರಬೇಡ; ನಿನಗೆ ದೇವರ ದಯೆ ದೊರಕಿತು ಇಗೋ ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ, ಆತನಿಗೆ ಯೇಸುವೆಂದು ಹೆಸರಿಡಬೇಕು. ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು. ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವೆನು. ಆತನು ಯಾಕೋಬನ ವಂಶವನ್ನು ಆತನಿಗೆ ಕೊಡುವೆನು. ಆತನು ಯಾಕೊಬನ ವಂಶವನ್ನು ಸದಾಕಾಲ ಆಳುವನು; ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ ಎಂದು ಹೇಳಿದನು. ಮರಿಯಳು ಆ ದೂತನನ್ನು ಇದು ಹೇಗಾದೀತು? ನಾನು ಪುರುಷನನ್ನು ಅರಿತವಳಲ್ಲಾ ಎಂದು ಕೇಳಿದ್ದಕ್ಕೆ ದೂತನು ನಿನ್ನ ಮೇಲೆ ಪವಿತ್ರಾತ್ಮ ಬರುವದು; ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವುದು ಆದದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು ಎಂದು ಹೇಳಿದನು.** (ಲೂಕ 1:30-35).

ದೇವರ ಆತ್ಮನಿಂದ ಮರಿಯಳ ಗರ್ಭದಲ್ಲಿ ಸೃಜನಶೀಲ ಅದ್ಭುತದ ಮೂಲಕವಾಗಿ ರೂಪಿಸಲ್ಪಟ್ಟ ಪುನರಾವತಾರವು ಸಾಧ್ಯಕರವಾಗಿತ್ತು. ಸ್ವಾಭಾವಿಕವಾಗಿ ಅಸಾಧ್ಯಕರವಾಗಿದ್ದಂತಹವುಗಳು ಮಹೋನ್ನತನ ಬಲದ ಮೂಲಕವಾಗಿ ಸಾಧ್ಯವಾಗಿ ಕಂಡು ಬಂದವು. ಮರಿಯಳ ಪ್ರಾಕೃತಿಕ ದೇಹದಲ್ಲಿ ಅಂತಹ ಪ್ರಕೃತ್ಯಾತೀತ ಕಾರ್ಯ ಜರುಗಲು ಪವಿತ್ರಾತ್ಮನು ಕಾರಣವಾಗಿದ್ದನು ಮತ್ತು ಆತನು ಸ್ವತಹ ದೇವರಾಗಿದ್ದು ಬದಲಾಗದವನಾಗಿದ್ದಾನೆ. (ಮಲಾಕಿಯ 3:6). ನಮ್ಮ ಇಂದಿನ ದಿನದಲ್ಲಿ ಜನರ ದೇಹಗಳಲ್ಲಿ ಸೃಜನಶೀಲ ಅದ್ಭುತಗಳು ಮತ್ತು ಆತನು ಸ್ವಸ್ಥತೆಯ ಕಾರ್ಯಗಳನ್ನು ಮಾಡಲು ಅಸಾಧ್ಯವೆಂದು ನಾವು ಏಕೆ ಪರಿಗಣಿಸುತ್ತೇವೆ? ನಾವು ಹಾಗೆ ಅಂದುಕೊಳ್ಳಬಾರದು! ಪವಿತ್ರಾತ್ಮ ದೇವರು ಜನರ ಮೇಲೆ ಇನ್ನೂ ಬರುತ್ತಾನೆ ಮತ್ತು ಅವರ ಪ್ರಾಕೃತಿಕ ದೇಹಗಳಲ್ಲಿ ಅದ್ಭುತವಾದ ಸ್ವಸ್ಥತೆಗಳನ್ನು ಮಾಡುತ್ತಾನೆ.

## ಪವಿತ್ರಾತ್ಮದೊಡನೆ ಮತ್ತು ಬಲದೊಡನೆ ಅಭಿಷೇಕಿಸಲ್ಪಟ್ಟದ್ದು

**ತರುವಾಯ ಯೇಸು ಪವಿತ್ರಾತ್ಮನ ಶಕ್ತಿಯಿಂದ ಕೂಡಿದವನಾಗಿ ತಿರಿಗಿ ಗಲಿಲಾಯಕ್ಕೆ ಹೋದನು; ಆತನ ಸುದ್ದಿಯು ಸುತ್ತಲಿರುವ ಪ್ರಾಂತ್ರಯದಲ್ಲೆಲ್ಲಾ ಹಬ್ಬಿಕೊಂಡಿತು. ಕರ್ತನ ಆತ್ಮವು ನನ್ನ ಮೇಲೆ ಅದೆ ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವುದಕ್ಕೆ ಅಭಿಷೇಕಿಸಿದನು, ಸೆರೆಯವರಿಗೆ**

**ಬಿಡುಗಡೆಯಾಗುವುದನ್ನು ಮತ್ತು ಕುರುಡರಿಗೆ ಕಣ್ಣು ಬರುವುದನ್ನು ಪ್ರಸಿದ್ಧಿಪಡಿಸುವುದಕ್ಕೂ ಮನಮುರಿದವರನ್ನು ಬಿಡಿಸಿ ಕಳುಹಿಸುವದಕ್ಕೂ ಕರ್ತನು ನೇಮಿಸಿರುವ ಶುಭ ವರ್ಷವನ್ನು ಪ್ರಚುರಪಡಿಸುವುದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ ಎಂಬುದು** (ಲೂಕ 4:14,18,19).

**ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು, ದೇವರು ಆತನ ಸಂಗಡ ಇದ್ದುದರಿಂದ ಆತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಬಾಧಿಸಲ್ಪಡುತ್ತಿರುವವರೆಲ್ಲರನ್ನು ಗುಣಮಾಡುತ್ತಾ ಸಂಚರಿಸಿದನು.** (ಅಪೊಸ್ತಲರ ಕೃತ್ಯಗಳು 10:38)

ನರಾವತಾರ ಎತ್ತಿದ್ದರಲ್ಲಿ ವಾಕ್ಯವೆಂಬಾತನಾದ ದೇವರು ಶರೀರಧಾರಿಯಾಗಿ ಕಂಡು ಬಂದನು. ಯೇಸು ತನ್ನ ಇಹಲೋಕದ ಸೇವೆಯ ಅವಧಿಯಲ್ಲಿ ಆತನ ದೈವಿಕ ಬಲಗಳಾದ, ಸರ್ವಶಕ್ತ, ಸರ್ವವ್ಯಾಪಿ, ಸರ್ವಜ್ಞಾನಗಳನ್ನು ನಿರಾಕರಿಸಲು ಸಂಕಲ್ಪಿಸಿದ್ದನು. (ಫಿಲಿಪ್ಪಿಯವರಿಗೆ 2:6-8, 1 ಯೋಹಾನ 17:5) ನಾವು ಮತ್ತು ನೀವು ನಡೆಯುವ ರೀತಿಯಲ್ಲೇ ಆತನು ನಡೆಯಲು ಆರಿಸಿಕೊಂಡನು (ಇಬ್ರಿಯರಿಗೆ 2:14,17). ಆತನ ಸೇವೆಯು ಪವಿತ್ರಾತ್ಮನ ಬಲದ ಮತ್ತು ಪ್ರಸನ್ನತೆಯ ಅಭಿಷೇಕದ ಫಲಿತಾಂಶವಾಗಿತ್ತು. ಆತನು ಅದ್ಭುತಕಾರ್ಯಗಳನ್ನು ಮಾಡಿದ ಕಾರಣವೇನೆಂದರೆ ಪವಿತ್ರಾತ್ಮನ ಬಲವು ಆತನ ಜೀವಿತದ ಮೂಲಕವಾಗಿ ಕಾರ್ಯ ನಿರ್ವಹಿಸುತ್ತಿತ್ತು ನಾವು ಇದನ್ನು ಅರ್ಥಮಾಡಿಕೊಳ್ಳುವುದು ಏಕೆ ಪ್ರಾಮುಖ್ಯವಾದದ್ದು? ಯಾಕೆಂದರೆ ಯಾವಾಗ ನಾವು ಇದನ್ನು ಅರ್ಥಮಾಡುಕೊಳ್ಳುತ್ತೇವೋ ಆಗ ಯೇಸುವು ಯೋಹಾನ 14:12ರಲ್ಲಿ ನಿಮಗೆ ನಿಜ ನಿಜವಾಗಿ ಹೇಳುತ್ತೇನೆ. ನನ್ನನ್ನು ನಂಬುವವನು ನಾನು ನಡಿಸುವ ಕ್ರಿಯೆಗಳನ್ನು ತಾನೂ ನಡಿಸುವನು ಮತ್ತು ಅವುಗಳಿಂದ ಮಹತ್ತಾದ ಕ್ರಿಯೆಗಳನ್ನು ನಡಿಸುವನು. ಯಾಕೆಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ.'' ಎಂಬುದಾಗಿ ಹೇಳಿದ್ದನ್ನು ಆಮೇಲೆ ನಾವು ಅರ್ಥ ಮಾಡಿಕೊಳ್ಳಬಹುದು ''ಯಾವನಾದರೂ'', ಅಂದರೆ ನಾನು ಮತ್ತು ನೀವು ಎಂಬುದಾಗಿ ಅರ್ಥ. ಆತನಲ್ಲಿ ನಮ್ಮ ನಂಬಿಕೆಯ ಮೂಲಕವಾಗಿ, ಆತನು ಮಾಡಿದವುಗಳನ್ನು ನಾವು ಮಾಡುತ್ತೇವೆ. ಎಂಬುದಾಗಿ ಯೇಸು ಹೇಳಿದ್ದಾನೆ. ನಾವು ಸುವಾರ್ತೆಯನ್ನು ಹೇಳುತ್ತೇವೆ. ಮನಮುರಿದವರನ್ನು ಕಟ್ಟುತ್ತೇವೆ. ಅಸ್ವಸ್ಥರಾಗಿರುವವರಿಗೆ ಸ್ವಸ್ಥತೆಯ ಸೇವೆ ಮಾಡುತ್ತೇನೆ, ದೆವ್ವಗಳನ್ನು ಬಿಡಿಸುತ್ತೇವೆ ಮತ್ತು ದೇವರ ಮಹೋನ್ನತ ಬಲವನ್ನು ಪ್ರದರ್ಶಿಸುತ್ತೇವೆ. ಇದು ಹೇಗೆ ಸಾಧ್ಯವಾಯಿತು? ಆತ್ಮನ ಬಲದ ಮೂಲಕವಾಗಿ. ಅದೇ ರೀತಿಯಾಗಿ ಯೇಸುವು ಮಾಡಿದನು. ಯೇಸುವು ಪರಲೋಕಕ್ಕೆ ಏರಿಹೋದಮೇಲೆ, ಆತನನ್ನು ನಂಬುವವರೊಳಗೆ ಮತ್ತು ಅವರ ಮೂಲಕವಾಗಿ ಕ್ರಿಯೆ ನಡಿಸಲು

ಪವಿತ್ರಾತ್ಮನನ್ನು ಆತನು ಕಳುಹಿಸಿದ್ದಾನೆ. ಪವಿತ್ರಾತ್ಮನ ಬಲದ ಮೂಲಕವಾಗಿ ವಿಶ್ವಾಸಿಗಳಾದ ನಾವು ಕ್ರಿಸ್ತನು ನಡಿಸಿದ ಕ್ರಿಯೆಗಳನ್ನು ನಡಿಸಬಹುದಾಗಿದೆ.

## ಎಲ್ಲಾ ವಿಶ್ವಾಸಿಗಳಿಗಾಗಿ ಆತ್ಮನ ಬಲ

**ಹೀಗಿರಲಾಗಿ ಆತನು ಅವರೊಂದಿಗೆ ಕೂಡಿದ್ದಾಗ್ಗೆ ಅವರಿಗೆ ಯೋಹಾನನಂತೂ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು, ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮದಲ್ಲಿ ಸ್ನಾನವಾಗುವುದು, ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟು ಹೋಗದೆ ತಂದೆ ಮಾಡಿದಂಥ ನೀವು ನನ್ನಿಂದ ಕೇಳಿದಂಥ ವಾಗ್ದಾನಕ್ಕೆ ಕಾದುಕೊಂಡಿರಿ ಎಂದು ಅಪ್ಪಣೆ ಕೊಟ್ಟನು ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು (ಅಪೊಸ್ತಲರ ಕೃತ್ಯಗಳು 1: 4,8)**

**ಪೇತ್ರನು ಅವರಿಗೆ ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ, ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು.** (ಅಪೊಸ್ತಲರ ಕೃತ್ಯಗಳು 2:38,39)

''ನನ್ನ ತಂದೆ ವಾಗ್ದಾನ ಮಾಡಿದ ವರಕ್ಕಾಗಿ'' ಕಾದುಕೊಂಡಿರಬೇಕೆಂಬುದು ಯೇಸು ತನ್ನ ಶಿಷ್ಯರಿಗೆ ಕೊಟ್ಟಂತಹ ಆಜ್ಞೆಯಾಗಿತ್ತು ಎಲ್ಲಾ ಮನುಷ್ಯರ ಮೇಲೆ ಪವಿತ್ರಾತ್ಮನನ್ನು ಸುರಿಸುತ್ತೇನೆ ಎಂಬುದಾಗಿ ತಂದೆಯು ವಾಗ್ದಾನ ಮಾಡಿದ್ದನು. (ಯೋವೇಲ 2:28,29) ಇದನ್ನು ಅಂತಿಮವಾಗಿ ನೆರವೇರಿಸಲು ಸಮಯವು ಬಂದಿದೆ ಮತ್ತು ಯೇಸುವು ತನ್ನ ಶಿಷ್ಯರನ್ನು ಅದಕ್ಕಾಗಿ ಸಿದ್ಧಪಡಿಸುತ್ತಿದ್ದಾನೆ. ಅವರ ಮೇಲೆ ಆತ್ಮನು ಬರುವಾಗ ಅವರು ಬಲವನ್ನು ಪಡೆದುಕೊಳ್ಳುತ್ತಾರೆ. ಎಂಬುದಾಗಿ ಯೇಸುವು ಹೇಳಿದ್ದನು. ಇದು ಒಂದು ದೇವರ ಬಲ - ದೈವಿಕ ಬಲ ಇದು ಯಾವುದೇ ಪ್ರಾಪಂಚಿಕ ಬಲವಲ್ಲ. ಆಮೇಲೆ ಇದು ಆ ಸಮಯವು ಬಂದಾಗ ಜುರುಗಿತು. ಪಂಚಶತ್ತಾಮ ದಿನದಂದು ''ವಾಗ್ದಾನವು'' ಸುರಿಯಲ್ಪಟ್ಟಿತು ಅಪೊಸ್ತಲನಾದ ಪೇತ್ರನು ವೀಕ್ಷಕರಿಗೆ ನಿಯತಿಯನ್ನು ವಿವರಿಸಿ ಅವರ ಮೇಲೆ ''ವಾಗ್ದಾನವನ್ನು''ನೀಡಿದನು. ''ನಮ್ಮ ಕರ್ತನಾದ ದೇವರು ಕರೆಯಲ್ಪಡುವವರು'' ದೂರದಲ್ಲಿರುವವರು ''ವಾಗ್ದಾನವು'' ಅವರ ಮೇಲೆ ಮಾತ್ರವಲ್ಲದೆ ಅವರ ಮಕ್ಕಳ ಮೇಲೂ, ದೂರದಲ್ಲಿರುವವರು ಮತ್ತು ''ನಮ್ಮ ಕರ್ತನಾದ ದೇವರು ಕರೆಯುವವರಿಗೂ'' ಇದೆ ಎಂಬುದಾಗಿ ಆತನು

ಹೇಳಿದ್ದಾನೆ. ಮತ್ತೊಂದು ಮಾತಿನಲ್ಲಿ ಹೇಳುವುದಾದರೆ ದೇವರ ರಾಜ್ಯಕ್ಕೆ ಜನರನ್ನು ದೇವರು ಕರೆಯುವ ಪರ್ಯಂತರ ಬಂದವರೆಲ್ಲರಿಗೂ ''ವಾಗ್ದಾನವು'' ದೊರೆಯುತ್ತದೆ ''ವಾಗ್ದಾನವು'' ಆತ್ಮನ ಸುರಿಸುವಿಕೆಯು ಎಲ್ಲಾ ವಿಶ್ವಾಸಿಗಳಿಗೂ ದೊರೆಯುತ್ತದೆ ಎಲ್ಲಾ ವಿಶ್ವಾಸಿಗಳು ಆತ್ಮನ ಸುರಿಸುವಿಕೆಯನ್ನು ಪಡೆಯಬಹುದು ಮತ್ತು ಅವನ ಅಥವಾ ಅವಳ ಜೀವಿತದ ಮೂಲಕವಾಗಿ ದೇವರು ನಿರ್ವಹಿಸುವ ಆತ್ಮನ ಬಲವನ್ನು ಅನುಭವಿಸಬಹುದಾಗಿದೆ.

## ಆದಿಸಭೆಯಲ್ಲಿ ಆತ್ಮನ ಬಲ

ಆದಿಸಭೆಯ ಮೂಲಕವಾಗಿ ಪವಿತ್ರಾತ್ಮನು ಕಾರ್ಯ ನಡೆಸಿದ್ದನ್ನು ಅಪೊಸ್ತಲರ ಕೃತ್ಯಗಳ ಪುಸ್ತಕವು ಉಲ್ಲೇಖಿಸಿದೆ. ಜನರು ಸ್ವಸ್ಥಹೊಂದಿದ್ದು, ಕುಂಟನು ನಡೆದಾಡಿದ್ದು, ಸತ್ತವರು ಎಬ್ಬಿಸಲ್ಪಟ್ಟಿದ್ದು, ದೆವ್ವಗಳು ಬಿಡಿಸಲ್ಪಟ್ಟಿದ್ದು ಮುಂತಾದವುಗಳ ಕುರಿತು ನಾವು ಓದುತ್ತೇವೆ. ದೇವರ ಬಲವು ಪ್ರದರ್ಶನಗೊಂಡ ದೇವರ ಬಲವು ಬಹಳ ಬಲಯುತವಾಗಿತ್ತು ಕರವಸ್ತ್ರಗಳ ಮೂಲಕವಾಗಿ ಜನರ ಮೇಲೆ ಪ್ರಾರ್ಥಿಸಿದಾಗ ಅವರು ಸ್ವಸ್ಥಹೊಂದಿದ್ದು ಮತ್ತು ಪೇತ್ರನ ನೆರಳು ಅವರ ಮೇಲೆ ಬಿದ್ದಾಗ ಗುಣ ಹೊಂದಿದ್ದನ್ನು ನೋಡುತ್ತೇವೆ. ಜನರು ಸತ್ತವರಂತೆ ದೇವರ ಆತ್ಮನಲ್ಲಿ ತಲ್ಲೀನರಾಗಿ ಬಿದ್ದುಕೊಂಡಿರುವುದನ್ನು, ದೇವರ ಸೇವಕನನ್ನು ವಿರೋಧಿಸಿದವನು ಕುರುಡನಾದದ್ದನ್ನು ಕುರಿತು ನಾವು ಓದುತ್ತೇವೆ. ಆದಿಸಭೆಯು ದೇವರ ಕುರಿತು ಬರೀ ಮಾತಾನಾಡುವ, ತಾತ್ವಿಕ ಸಭೆಯಾಗಿರಲಿಲ್ಲ, ಇಲ್ಲಾ! ಆದಿ ಸಭೆಯು ಅವರ ಮಧ್ಯದಲ್ಲಿ ದೇವರ ಅನುಭವ ಪಡೆದ ಸಭೆಯಾಗಿತ್ತು. ಆದಿಸಭೆಯು ದೇವರ ಬಲವನ್ನು ತಪ್ಪಿಹೋದ ಪ್ರಪಂಚಕ್ಕೆ ತೋರಿಸುವಂತದ್ದಾಗಿತ್ತು. ಇದು ಕಾರ್ಯನಿರತನಾಗಿದ್ದಂತಹ ದೇವರ ಆತ್ಮನ ಬಲದ ಮೂಲಕವಾಗಿ ಸಾಧ್ಯವಾಯಿತು. ನಮ್ಮ ಮಧ್ಯದಲ್ಲಿ ಆತ್ಮನ ಬಲವು ನಿರಾತಂಕವಾಗಿ ಚಲಿಸಲು ಅವಕಾಶ ಕೊಡಬೇಕು. ಆತನ ಬಲವನ್ನು ತೋರ್ಪಡಿಸಲು ದೇವರ ಆತ್ಮನಿಗೆ ಸ್ಥಳವನ್ನು ಒದಗಿಸದೇ, ನಾವೆಲ್ಲರೂ ನಮ್ಮ ವಾಕ್ಚಾತುರ್ಯದಿಂದ ತುಂಬಿದ ಸಂದೇಶಗಳು ಮತ್ತು ಕಾರ್ಯಕ್ರಮಗಳಲ್ಲೇ ಮೆರೆಯುವುದು ಅಪಮಾನಕರವಾಗಿದೆ.

## ವಾಕ್ಯದ ಸೇವೆಯಲ್ಲಿ ಬಲದ ಆತ್ಮನು

**ನಿಮ್ಮ ನಂಬಿಕೆಯು ಮಾನುಷಜ್ಞಾನವನ್ನು ಆಧಾರ ಮಾಡಿಕೊಳ್ಳದೆ ದೇವರ ಶಕ್ತಿಯನ್ನು ಆಧಾರ ಮಾಡಿಕೊಂಡಿರಬೇಕೆಂದು ನನ್ನ ಬೋಧನೆಯಲ್ಲಿ ಪ್ರಸಂಗದಲ್ಲಿಯೂ ಮನವೊಲಿಸುವ ಜ್ಞಾನವಾಕ್ಯಗಳನ್ನು**

**ನಾನು ಪ್ರಯೋಗಿಸದೆ ದೇವರಾತ್ಮನ ಬಲವನ್ನು ತೋರ್ಪಡಿಸುವ ವಾಕ್ಯಗಳನ್ನೇ ಪ್ರಯೋಗಿಸಿದೆನು.** (1 ಕೊರಿಂಥದವರಿಗೆ 2:4,5)

**ದೇವರ ರಾಜ್ಯವು ಮಾತಿನಲ್ಲಿ ಇಲ್ಲ, ಶಕ್ತಿಯಲ್ಲಿಯೇ ಆಧಾರಗೊಂಡದೆ,** (1 ಕೊರಿಂಥದವರಿಗೆ 4:20)

ವಾಕ್ಯದ ಸೇವೆಯು, ಧೀಮಂತ (ಬೌದ್ಧಿಕ) ಅಭ್ಯಾಸದಿಂದ ಕೂಡಿರುವುದಿಲ್ಲ ಇದು ದೇವರ ಆತ್ಮನ ಬಲದಿಂದ ಅಭ್ಯಾಸಿಸುವ ಒಂದು ಆತ್ಮಿಕ ಕೆಲಸವಾಗಿದೆ. ''ಜ್ಞಾನ ಮತ್ತು ವಾಕ್ಚಾತುರ್ಯದ ಮಾತುಗಳಲ್ಲಿ'' ಯಾವುದೇ ರೀತಿಯ ತಪ್ಪಿಲ್ಲ, ಪ್ರವೀಣರಲ್ಲಿ ಜ್ಞಾನವನ್ನೇ ಹೇಳುತ್ತೇವೆ, ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥವನ್ನು ತಿಳಿಸುವಲ್ಲಿ ದೇವರ ಜ್ಞಾನವನ್ನೇ ಹೇಳುತ್ತೇವೆ, ಇದು ಇಹಲೋಕಾಧಿಕಾರಿಗಳ ಜ್ಞಾನವಲ್ಲ ಎಂಬುದಾಗಿ ಪೌಲನು ಹೇಳಿದ್ದಾನೆ. (1 ಕೊರಿಂಥದವರಿಗೆ 2:6,7) ಹಾಗಿದ್ದಾಗ್ಯೂ ವಾಕ್ಯದ ಸೇವಕರು ''ಜ್ಞಾನ ಮತ್ತು ವಾಕ್ಯಾತುರ್ಯದ ಮಾತುಗಳ'' ಮೇಲೆ ಅವಲಂಬಿಸಿರುವುದಿಲ್ಲ, ಆದರೆ ಆತ್ಮನ ಬಲದ ತೋರ್ಪಡಿಸುವಿಕೆ ಮತ್ತು ಕಾರ್ಯವೈಖರಿಯ ಮೇಲೆ ಅವಲಂಬಿಸಿರುವುದಾಗಿರುತ್ತದೆ. (1 ಥೆಸಲೋನಿಕದವರಿಗೆ 1:5 ನ್ನು ನೋಡಿರಿ) ಅನೇಕ ಸ್ಥಳಗಳಲ್ಲಿ ಸಭೆಯು ದೇವರ ಆತ್ಮನ ಬಲಕ್ಕಿಂತಲೂ ಮಿಗಿಲಾಗಿ ಚಾತುರ್ಯತೆಯಲ್ಲಿ ಉತ್ತುಂಗದಲ್ಲಿರುವುದು ಬಹಳ ದುಃಖಕರ ಸಂಗತಿಯಾಗಿದೆ. ಅನೇಕ ಸಭೆಗಳಲ್ಲಿ ಅಭಿಷೇಕಕ್ಕಿಂತ ಅಧಿಕವಾಗಿ ಚಾತುರ್ಯತೆಯಲ್ಲಿರುವುದು ಒಂದು ವೈಲಕ್ಷಣವಾಗಿರುತ್ತದೆ. ಇದು ಅಪಮಾನಕರ! ಆತನ ವಾಕ್ಯವು ಆತನ ಆತ್ಮದ ಬಲವನ್ನು ತೋರ್ಪಡಿಸಲು ಸೇವಕರಿಗಾಗಿರುವ ದೇವರ ನೈಜ ಆಶಯದಲ್ಲಿ ಎಂತಹ ನಿರಾಕರಣವಾಗಿದೆ! ವಾಕ್ಯದ ಸೇವಕರಾಗಿ ''ದೇವರ ರಾಜ್ಯವು ಮಾತಿನಲ್ಲಿ ಇಲ್ಲ, ಶಕ್ತಿಯಲ್ಲಿಯೇ ಆಧಾರಗೊಂಡಿದೆ.'' ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು. (1 ಕೊರಿಂಥದವರಿಗೆ 4:20)

## ಆತ್ಮನ ಬಲ ಮತ್ತು ಆತನ ವರಗಳು

ಕೊರಿಂಥದವರಿಗೆ 12:7-11 ರಲ್ಲಿರುವ ಆತ್ಮನ ಒಂಭತ್ತು ವರಗಳಲ್ಲಿ ಕನಿಷ್ಟ ಮೂರು ವರಗಳು ದೇವರ ಬಲದ ಪ್ರಬಲ ತೋರ್ಪಡಿಸುವಿಕೆಯ ಫಲಿತಾಂಶವಾಗಿರುತ್ತದೆ. ನಂಬಿಕೆಯ ವರ, ಸ್ವಸ್ಥತೆಯ ವರ, ಮತ್ತು ಮಹತ್ಕಾರ್ಯಗಳನ್ನು ಮಾಡುವ ವರಗಳು, ಪವಿತ್ರಾತ್ಮನು ಆತ್ಮನ ಬಲವಾಗಿ ಕಾರ್ಯ ನಿರ್ವಹಿಸುವುದರ ಫಲಿತಾಂಶವಾಗಿದೆ. ನಾವು ಇನ್ನೂ ಹೆಚ್ಚಾಗಿ ಇಂತಹ ಆತ್ಮನ ತೋರ್ಪಡಿಸುವಿಕೆಗಳನ್ನು ಬಯಸಬೇಕು.

## ಬಲದ ಆತ್ಮನು ಮತ್ತು ಸೇವಾ ಹುದ್ದೆಗಳು

**ನಾನು ಹಿಂಸೆಯನ್ನು ಸ್ಥಿರಚಿತ್ತದಿಂದ ತಾಳಿಕೊಳ್ಳುವದರಲ್ಲಿಯೂ ಸೂಚಕ ಕಾರ್ಯಗಳನ್ನು ಅದ್ಭುತಗಳನ್ನೂ ಮಹತ್ಕಾರ್ಯಗಳನ್ನೂ ನಡಿಸಿದ್ದರಲ್ಲಿಯೂ ಅಪೊಸ್ತಲನಿಗೆ ಇರತಕ್ಕ ಲಕ್ಷಣಗಳು ನಿಮ್ಮ ಮಧ್ಯದಲ್ಲಿ ತೋರಿದವು.** (2 ಕೊರಿಂಥದವರಿಗೆ 12:12)

ಯರ್‍ಯಾರು ಸೇವಾ ಹುದ್ದೆಗೆ (ಸ್ಥಾನ) ಕರೆಯಲ್ಪಟ್ಟಿರುವವರೊ ಅವರ ಮೇಲೆ ಆತ್ಮನ ಬಲವು ವಿಶೇಷ ರೀತಿಯಲ್ಲಿ ನೆಲೆಗೊಂಡಿರುತ್ತದೆ. (ಅಪೊಸ್ತಲರು, ಪ್ರವಾದಿಗಳು, ಸಭಾಪಾಲಕರು ಮತ್ತು ಸುವಾರ್ತಿಕರು) ಯಾರಾರು ಅಪೊಸ್ತಲರ ಸೇವೆಯಲ್ಲಿರುತ್ತಾರೊ ಅವರ ಮೇಲೆ ವಿಶೇಷವಾಗಿರುತ್ತದೆ. ಆತ್ಮನ ಬಲದ ವಿಶೇಷ ಅಭಿಷೇಕದ ಪರಿಣಾಮದ ಅದ್ಭುತಗಳು ಮತ್ತು ಮಹತ್ಕಾರ್ಯಗಳು, ಮತ್ತು ಆಶ್ಚರ್ಯಕರವಾದ ಸೂಚಕಕಾರ್ಯಗಳಿಂದ ಅಪೊಸ್ತಲರ ಸೇವೆಯು ಗುರ್ತಿಸಲ್ಪಟ್ಟಿರುತ್ತದೆ.

## ಆತ್ಮನ ಬಲವು ಮತ್ತು ನೀವು

ಆತನು ಯೋಜಿಸಿದವುಗಳನ್ನು ನೆರವೇರಿಸಲು ಮತ್ತು ನಮ್ಮಲ್ಲಿ ಪ್ರತಿಯೊಬ್ಬರು ದೇವರು ಸಂಕಲ್ಪಿಸದವರಾಗಿ ಕಂಡುಬರಲು ಪ್ರತಿ ವಿಶ್ವಾಸಿಯ ಒಳಗೆ ಮತ್ತು ಮೂಲಕವಾಗಿ ಕಾರ್ಯ ಮಾಡಲು ದೇವರ ಆತ್ಮನು ಅಪೇಕ್ಷಿಸುತ್ತಾನೆ. ಹಾಗಿದ್ದಾಗ್ಯೂ ನಾವು ಆತನಿಗೆ ಅವಕಾಶ ಕೊಡುವ ಪ್ರಮಾಣದಿಂದ ಮಾತ್ರ ಆತನು ಕಾರ್ಯ ಮಾಡುತ್ತಾನೆ. ನಿಮ್ಮ ಮೂಲಕವಾಗಿ ಮತ್ತು ನಿಮ್ಮೊಳಗೆ ದೇವರ ಆತ್ಮನು ಬಲದ ಆತ್ಮನಾಗಿರಲು ಬಯಸಬೇಕು ಮತ್ತು ಅವಕಾಶ ಕೊಡಬೇಕೆಂಬುದಾಗಿ ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ. ಅದರಿಂದ ಯೇಸುಕ್ರಿಸ್ತನೇ ಎಲ್ಲರ ಕರ್ತನೆಂದು ಪ್ರಪಂಚವು ತಿಳಿಯುತ್ತದೆ.

ತ್ರೈಯೆಕ ದೇವರ ಉದ್ದೇಶಗಳನ್ನು ದೇವರ ಆತ್ಮನು ನಿರ್ವಹಿಸುವವನಾಗಿದ್ದಾನೆ. ಆತನೇ ಸೃಷ್ಟಿಕರ್ತನೂ, ಬದಲಾಯಿಸುವವನೂ, ರೂಪಿಸುವವನೂ, ಮತ್ತು ನುಡಿದ ಮಾತಿಗನುಸಾರವಾಗಿ ಹೊಂದಾಣಿಕೆಯಲ್ಲಿ ಸ್ವಾಭಾವಿಕ ಪ್ರಪಂಚವನ್ನು ಆಕಾರಗೊಳಿಸುವವನೂ ಆಗಿದ್ದಾನೆ

- ದೇವರ ಆತ್ಮನು ಜನರ ಮೇಲೆ ಚಲಿಸಲು ಶಕ್ತನಾಗಿದ್ದಾನೆ. ಮತ್ತು ಪ್ರಕೃತ್ಯಾತೀತ ದೈಹಿಕ ಬಲ ಮತ್ತು ಸಾಮರ್ಥ್ಯಗಳ ಪಾಲು ಕೊಡುತ್ತಾನೆ.
- ಯಾವಾಗ ಒಬ್ಬ ಪುರುಷ ಅಥವಾ ಸ್ತ್ರೀಯು ದೇವರಿಂದ ಆದೇಶಾಧಿಕಾರವನ್ನು ಮತ್ತು ವಿಶೇಷ ಕೆಲಸವನ್ನು ಮಾಡಲು ಆತ್ಮನಿಂದ ಅಭಿಷೇಕ ಹೊಂದಿದ್ದಾನೋ/ಳೋ ಆಗ ಯಾವುದೇ ರೀತಿಯ ವಿರೋಧ ವೈರಿಯ ಕಾರ್ಯಗಳು ಗೆಲ್ಲುವುದಿಲ್ಲ
- ವಿಶ್ವಾಸಿಗಳಾದ ನಾವು ಯೇಸುಕ್ರಿಸ್ತನು ಮಾಡಿದಂತಹ ಕಾರ್ಯಗಳನ್ನು ಪವಿತ್ರಾತ್ಮನ ಬಲದ ಮೂಲಕವಾಗಿ ಮಾಡಬಹುದಾಗಿದೆ.
- ಪ್ರತಿಯೊಬ್ಬ ವಿಶ್ವಾಸಿಯು ಆತ್ಮನ ಸುರಿಸುವಿಕೆಯನ್ನು ಪಡೆಯಬಹುದಾಗಿದೆ ಮತ್ತು ಅವನ ಅಥವಾ ಅವಳ ಜೀವಿತದ ಮೂಲಕವಾಗಿ ಕಾರ್ಯ ನಿರ್ವಹಿಸುವ ದೇವರ ಆತ್ಮನ ಬಲವನ್ನು ಅನುಭವಿಸಬಹುದಾಗಿದೆ.
- ಆದಿಸಭೆಯು ಬರೀ ದೇವರ ಬಗ್ಗೆ ಮಾತಾನಾಡುವಂತಹ ತಾತ್ವಿಕ ಸಭೆಯಾಗಿರಲಿಲ್ಲ. ತಮ್ಮ ಮಧ್ಯದಲ್ಲಿ ಅವರು ದೇವರನ್ನು ಅನುಭವಿಸಿದರು ಮತ್ತು ನಾಶನದ ಪ್ರಪಂಚಕ್ಕೆ ದೇವರ ಬಲವನ್ನು ತೋರ್ಪಡಿಸಿದರು.
- ವಾಕ್ಯ ಸೇವೆಯು, ಚಾತುರ್ಯವನ್ನು ಅಭ್ಯಾಸಿಸುವ ಬರೀ ಚಾತುರ್ಯದ ಅಭ್ಯಾಸದಿಂದ ಕೂಡಿರುವುದಿಲ್ಲ ಇದು ಒಂದು ಆತ್ಮಿಕ ಕೆಲಸ ಮತ್ತು ದೇವರ ಆತ್ಮನ ಬಲದಿಂದ ಆಭ್ಯಾಸಿಸುವಂತಹದ್ದಾಗಿರಬೇಕು.
- ನಂಬಿಕೆಯ ವರ, ಸ್ವಸ್ಥತೆಯ ವರ ಮತ್ತು ಮಹತ್ಕಾರ್ಯಗಳನ್ನು ಮಾಡುವ ವರಗಳು ಬಲದ ಆತ್ಮನಾಗಿ ಕಾರ್ಯನಿರ್ವಹಿಸುವ ಪವಿತ್ರಾತ್ಮನ ಫಲಿತಾಂಶವಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

'ಲಿವಿಂಗ್ ಸ್ಟ್ರಾಂಗ್ ಎಂಬ ಗಾಡ್ ಟಿವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

# ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

## ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್‌ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಪವಿತ್ರಾತ್ಮನು ದೇವರಾಗಿದ್ದಾನೆ. ತಂದೆ ಮತ್ತು ಮಗನೊಂದಿಗೆ ಒಂದಾಗಿದ್ದಾನೆ, ಆತನು ಭೂಮಿಯ ಮೇಲೆ ದೇವ ಜನರೊಳಗೆ ಮತ್ತು ಅವರ ಮೂಲಕವಾಗಿ ಚಲಿಸುವಾತನಾಗಿದ್ದಾನೆ. ಆತನು ತನ್ನನ್ನು ವಿವಿಧ ಬಗೆಯ ಮಾರ್ಗಗಳಲ್ಲಿ ತಿಳಿಯಪಡಿಸುತ್ತಾನೆ ಮತ್ತು ದೇವಜನರೊಳಗೆ ಅವರ ಮೂಲಕವಾಗಿ ಕಾರ್ಯ ಮಾಡುತ್ತಾನೆ ಮತ್ತು ಅನೇಕ ಭಿನ್ನವಾದ ವಿಷಯಗಳನ್ನು ಸಾಧಿಸಲು ಸಮರ್ಥಗೊಳಿಸುತ್ತಾನೆ. ಈ ಒಂದು ಪುಸ್ತಕದಲ್ಲಿ ದೇವರ ಆತ್ಮನ ಪ್ರಕಟನೆ, ಬಲ ಮತ್ತು ಜ್ಞಾನದ ವಿಷಯಾಂಶಗಳನ್ನು ನಿಮಗೆ ಪರಿಚಯಿಸುವುದು ನಮ್ಮ ಉದ್ದೇಶವಾಗಿದೆ.

ಆತನು ಯೋಜಿಸಿದವುಗಳನ್ನು ನೆರವೇರಿಸಲು ಮತ್ತು ನಮ್ಮಲ್ಲಿ ಪ್ರತಿಯೊಬ್ಬರು ದೇವರು ಸಂಕಲ್ಪಿಸಿದವುಗಳಾಗಿ ಕಂಡುಬರಲು ಪ್ರತಿ ವಿಶ್ವಾಸಿಯ ಒಳಗೆ ಮತ್ತು ಅವರ ಮೂಲಕವಾಗಿ ಕಾರ್ಯಮಾಡಲು ದೇವರ ಆತ್ಮನು ಅಪೇಕ್ಷಿಸುತ್ತಾನೆ. ಹಾಗಿದ್ದಾಗ್ಯೂ ನಾವು ಆತನಿಗೆ ಅವಕಾಶ ಕೊಡುವ ಪ್ರಮಾಣದಿಂದ ಮಾತ್ರ ಆತನು ಕಾರ್ಯ ಮಾಡುತ್ತಾನೆ. ನಿಮ್ಮ ಮೂಲಕವಾಗಿ ಮತ್ತು ನಿಮ್ಮೊಳಗೆ ದೇವರ ಆತ್ಮನು ಬಲದ ಆತ್ಮನಾಗಿರಲು ಬಯಸಬೇಕು ಮತ್ತು ಅವಕಾಶ ಕೊಡಬೇಕೆಂಬುದಾಗಿ ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ಆದ್ದರಿಂದ ಯೇಸುಕ್ರಿಸ್ತನೇ ಎಲ್ಲರ ಕರ್ತನೆಂದು ಪ್ರಪಂಚವು ತಿಳಿಯುತ್ತದೆ.

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org